THE KARNATAKA LAND REFORMS (AMENDMENT) BILL, 1980.

Motion to Consider

SRI S. BANGARAPPA (Minister for Revenue and Agriculture) I beg to move.

"That the Karnataka Land Reforms (Amendment) Bill, 1980 be taken into consideration."

The question was proposed.

ಶ್ರೀ ಎಸ್. ಬಂಗಾರಪ್ಪ (ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಸುಧಾರಣಾ ಕಾನೂನಿಗೆ ನಾವು ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಸೆಕ್ಷನ್ ೫೫ರಲ್ಲಿ ಒಬ್ಬ ಗೇಣಿದಾರ ತನ್ನ ಭೂ ಒಡೆತನದ ಹಕ್ಕನ್ನು ಪಡೆಯಬೇಕಾದರೆ ೧೦೦ ರೂಪಾಯಿ ಹಣವನ್ನು ಕಟ್ಟಿಬಿಟ್ಟರೆ ಸಾಕು ಅಂತ ಇತ್ತು. ಒಂದು ಯೂನಿಟ್‌ಗೆ ಕೊಡಬೇಕೆಂದು ಇತ್ತು. ನಾನು ಸಚಿವನಾದ ಮೇಲೆ ಸ್ವಲ್ಪ ಪ್ರೋಗ್ರೇಸೀವ್ ಆಗಿ ಮಾಡತಕ್ಕ ದೃಷ್ಟಿಯಿಂದ ಒಂದು ಯೂನಿಟ್ ಇದ್ದುದನ್ನು ಎರಡು ಯೂನಿಟ್ ಮಾಡಿ ಸ್ವಲ್ಪ ಹೆಚ್ಚಿನ ಸಹಾಯ ಗೇಣಿದಾರನಿಗೆ ದೊರಕಲಿ ಎನ್ನುವ ದೃಷ್ಟಿಯಿಂದ ತಿದ್ದುಪಡಿಯನ್ನು ತಂದಿದ್ದೇವೆ. ಗೇಣಿದಾರನಿಗೆ ಇದರಿಂದ ಏತಕ್ಕೆ ಉಪಯೋಗವಾಗುತ್ತದೆಂದರೆ, ಗೇಣಿದಾರ ಸಾಲ ಸೋಲ ತೆಗೆದುಕೊಳ್ಳುವುದಕ್ಕೆ, ಜಮೀನು ಅಬಾದು ಮಾಡುವುದಕ್ಕೆ ಉಪಯೋಗವಾಗುತ್ತದೆ ; ಹಣ ಕೂಡ ಜಾಸ್ತಿ ಸಿಕ್ಕುತ್ತದೆ. ಇದು ಹಿಂದೆ ಹೊರಡಿಸಿದಂತ ಆರ್ಡಿನೆನ್ಸ್ ರೀಪ್ಲೇಸ್ ಮಾಡತಕ್ಕ ಮಸೂದೆ, ಈ ಮಸೂದೆಗೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

SRI B. B. SAYANAK.—Mr Chairman, Sir. I rise to support this Bill. This is a good Bill for the small tenants. But I want to submit some points regarding the present Land Tribunals. The Land Tribunals have been abolished by this Government and there is no Land Tribunal now functioning. The Tenants are suffering now. So, I request the Government to re-constitute the Land Tribunals immediately. Sir, they must bear in mind another thing i. e., when they are going to re-constitute the Land Tribunals, the Government must take into account so many factors. Government had constituted the Land Tribunals with persons who could not understand the Law, what is the Partnership Deed, what are the implications of Law etc. such persons were included in these Land Tribunals.

MR. CHAIRMAN.—That is not in the scope of the Bill.

† SRI B. B. SAYANAK.—Sir, I know the scope of the Bill. But the constitution of the Land Tribunals is very important because so many persons are suffering now. The Government must re-constitute the Land Tribunals immediately as it has been delayed. But while re-constituting these Land Tribunals, the Government must see that nominate men of ability. The persons who are included in these Land Tribunals must be honest. they must be knowing the Law With these words, I support this Bill.

† ಶ್ರೀ ಎ. ಜಿ. ಕೊಡಗಿ (ಬೈಂದೂರು) — ಮಾನ್ಯ ಸಭಾಧ್ಯಕ್ಷರೆ, ಈದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಮಸೂದೆಯ ತಿದ್ದುಪಡಿ ಒಳ್ಳೆಯ ಸದುದ್ದೇಶದಿಂದ ಕೂಡಿದೆಯೆಂದು ನಾನು ತಿಳಿದು ಕೊಂಡಿದ್ದೇನೆ. ಆದರೆ ಮಾನ್ಯ ಮಂತ್ರಿಯವರು ಈ ವಿಚಾರದ ಬಗ್ಗೆ ತಮ್ಮ ಸ್ಪಷ್ಟವಾದ ತಿಳುವಳಿ ಕೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೊದಲನೆಯದಾಗಿ ಸಣ್ಣ ಹಿಡುವಳಿದಾರರು, ಆರ್ಥಿಕವಾಗಿ ಹಿಂದುಳಿದವರು, ದುರ್ಬಲವರ್ಗದ ವರು ಈ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದು ಹಿಂದುಳಿದ ವರ್ಗದ ವರು ಯಾರಿದ್ದಾರೆ ಅವರು ಭೂಮಾಲೀಕರಿಗೆ ಸಂಪೂರ್ಣವಾಗಿ ಹಣವನ್ನು ಕೊಡುವುದಕ್ಕೆ ಶಕ್ತಿ ಇರುವು ದಿಲ್ಲ ; ಅಂಥವರಿಂದ ೧೦೦, ರೂಪಾಯಿಗಳನ್ನು ಪಡೆದು ಅವರ ಹೆಸರಿಗೆ ಪಟ್ಟಾವನ್ನು ಕೊಡ ಬೇಕು. ಮತ್ತು ಇನ್ನುಳಿದ ಹಣವನ್ನು ಸಂಬಂಧಪಟ್ಟ ಭೂ ಮಾಲೀಕರಿಗೆ ಸರ್ಕಾರದವರೇ ಕೊಡ ಬೇಕೆಂಬುದಾಗಿ ಹಿಂದೆ ಚರ್ಚೆಯಾಗಿತ್ತು. ಆದರೆ ಇತ್ತೀಚಿನ ತಿದ್ದುಪಡಿಯನ್ನು ನೋಡಿದರೆ ಇದರಲ್ಲಿ ಸ್ವಲ್ಪ ಬದಲಾವಣೆಯಾಗಿದೆಯೆಂದು ನನಗನಿಸುತ್ತದೆ. ಹೇಗೆಂದರೆ, ಆ ಬಡವನಿಂದ ೧೦೦ ರೂ. ಗಳನ್ನು ಮೊದಲನೇ ಕಂತಾಗಿ ತೆಗೆದುಕೊಂಡು, ನಂತರ ಅವನಿಗೆ ಪಟ್ಟಾವನ್ನು ಕೊಡುತ್ತಾರೇನೋ ಎಂದು ಅನಿಸುತ್ತದೆ. ಆದರೆ ಅಂಥ ಒಂದು ಉದ್ದೇಶ ಇದಲ್ಲ. ಬಡವರಿಗೆ, ಹಿಂದುಳಿದವರಿಗೆ ಅನು ಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ೧೦೦, ರೂ. ಗಳನ್ನು ಮಾತ್ರ ಅವರಿಂದ ತೆಗೆದು ಕೊಂಡು ಅವರಿಗೆ ಆ ಜಮೀನಿನ ಸಂಪೂರ್ಣ ಹಕ್ಕನ್ನು ಕೊಡಬೇಕು. ಅನಂತರ ಬಾಕಿ ಹಣವನ್ನು ಸರ್ಕಾರದವರೇ ಆ ಭೂಮಾಲೀಕರಿಗೆ ಕೊಡಬೇಕೆಂದು ಮೊದಲು ಇತ್ತು. ಆದರೆ ಈಗ ಅದು ಸ್ವಲ್ಪ ಬದಲಾವಣೆ ಆದಂತೆ ಕಾಣುತ್ತಿದೆ. ಅಂದರೆ 'ಒಂದು ನೂರು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಹಣವನ್ನು ನೀಡಿದ ಸಂದರ್ಭದಲ್ಲಿ ಅವರಿಗೆ ಪ್ರಮಾಣ ಪತ್ರವನ್ನು ನೀಡಬಹುದೆಂದು'' ಇದೆ. ಇಲ್ಲಿ ''ಒಂದು ನೂರು ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಹಣ'' ಎಂದು ಉಪಯೋಗಿಸಿರುವುದರಿಂದ ಇದರ ಅರ್ಥ ಏನೆಂಬುದು ನನಗೆ ಅರ್ಥವಾಗುತ್ತಿಲ್ಲವಾದ್ದರಿಂದ ಮಾನ್ಯ ಸಚಿವರು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು.

ಇನ್ನು ಎರಡನೆಯದಾಗಿ ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ''ಅವನಿಂದ ೧೦೦, ರೂ. ಗಳನ್ನು ತೆಗೆದುಕೊಂಡನಂತರ ಅವನಿಗೆ ಸಂಪೂರ್ಣವಾದ ಹಕ್ಕುಪತ್ರವನ್ನು ನೀಡಬೇಕು, ಮತ್ತು ಮತ್ತೊಂದುಸಾರಿ ಅವನಿಂದ ಕಂತಿನ ಹಣವನ್ನೂ ತೆಗೆದುಕೊಳ್ಳಬಾರದೆಂದು'' ಅಳವಡಿಸಿಕೊಳ್ಳಬೇಕು.

ಅಧ್ಯಕ್ಷರೆ ನಾನು ಮೊದಲೇ ಹೇಳಿದಹಾಗೆ ಈಗ ತಂದಿರುವ ಮಸೂದೆಯು ಹಿಂದುಳಿದವರಿಗೆ ಅನುಕೂಲವಾಗುವ ಒಂದು ದೊಡ್ಡ ಉದ್ದೇಶವಿರುವುದರಿಂದ ಕೇವಲ ೧೦೦ರೂಪಾಯಿಗೆ ಪಟ್ಟಾ ಪಡೆದು ಮುಂದಿನ ವರ್ಷದಿಂದಲೇ ಅಸಲು ಬಡ್ಡಿಯನ್ನು ವಸೂಲು ಮಾಡುವುದಕ್ಕೆ ಹೊರಟರೆ ರೈತರಿಗೆ ಮತ್ತಷ್ಟು ತೊಂದರೆಯನ್ನು ಕೊಟ್ಟಂತಾಗುತ್ತದೆ. ಆದ್ದರಿಂದ ಅವರಿಗೆ ಕೊಡುವ ಹಕ್ಕು ಶಾಶ್ವತವಾಗಿರಬೇಕು. ಕೇವಲ ರೈತರಿಂದ ೧೦೦ ರೂಪಾಯಿಗಳನ್ನು ಪಡೆದು ಪಟ್ಟಾಕೊಟ್ಟು ಸಂಪೂರ್ಣವಾದ ಹಕ್ಕನ್ನು ಈ ವಿಧೇಯಕದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ ಕ್ಷೇತ್ರ).—ಸನ್‌ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಎ. ಜಿ. ಕೊಡಗಿಯವರು ಹೇಳಿದ ಮಾತುಗಳನ್ನು ನಾನು ಸಮರ್ಥನೆ ಮಾಡುತ್ತಾ, ಈ ವಿಧೇಯಕದ ಉದ್ದೇಶ ಏನು ಇದೆ ಅದನ್ನು ನಾವು ಎಲ್ಲರೂ ಒಪ್ಪತಕ್ಕಂಥ ಉದ್ದೇಶವಾಗಿರುತ್ತದೆ. ನಾವು ಕಳೆದ ೧೦-೨೦ ವರ್ಷಗಳಿಂದಲೂ ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕಂಥ ಭೂಹೀನ ರೈತರು ಮತ್ತು ಸಣ್ಣ ರೈತರು, ಅವರ ಸಮಸ್ಯೆಗಳನ್ನು ಯಾವುದೇ ಸರ್ಕಾರ ಇದ್ದರೂ ಅದರ ಗಮನಕ್ಕೆ ತರುತ್ತಲೇ ಇದ್ದೆವು. ಯಾವಾ ಗಲೂ ಉಳುವವನಿಗೆ ಭೂಮಿ ಅವನಿಗೇನೆ ಒಡೆತನ ಕೊಡಬೇಕೆಂದು ಹೇಳುತ್ತಾ ಹೋರಾಟ ಮಾಡಿ ಕೊಂಡೇ ಬಂದಿರುತ್ತೇವೆ. ಉಳುವವನಿಗೆ ಭೂಮಿ ಎನ್ನುವ ತತ್ವವನ್ನು ಒಪ್ಪಿಕೊಂಡಿರುವ ಸರ್ಕಾರ ಯಾವುದೇ ಇರಲಿ ಅದನ್ನು ಬೇರೆರೀತಿಯಲ್ಲಿ ಮಾರಾಟ ಮಾಡಿ ಅವನಿಗೆ ಪಟ್ಟಾ ಕೊಡುವುದಾದರೆ ಅದು ಉಳುವವನಿಗೆ ಭೂಮಿ ಕೊಟ್ಟಂತಾಗುವುದಿಲ್ಲ. ಸಾಹುಕಾರರು ಯಾವ ರೀತಿ ಮಾರಾಟ ಮಾಡುತ್ತಾರೆ ಆದರಂತೆ ಸರ್ಕಾರದವರು ಒಂದು ರೀತಿಯಲ್ಲಿ ಮಾರಾಟ ಮಾಡಿದಂತಾಗುತ್ತದೆ. ಇದರಿಂದ ಉಳುವವನಿಗೆ ಭೂಮಿ ಎನ್ನುವ ಒಂದು ಸದುದ್ದೇಶ ಏನು ಇದೆ ಅದು ಆದಾತಾಗುವುದಿಲ್ಲ. ಇದು ಈಗ ಏನಾಗಿದೆ ಎಂದರೆ ಮೂಗಿನ ತುಂಬ ತುಪ್ಪ ಹಚ್ಚಿ, ಹೊಟ್ಟೆತುಂಬಾ ತುಪ್ಪ ಹಾಕಿದ್ದೇವೆ ಎಂದಂತಾಗಿದೆ, ಈ ರೀತಿ

ಹೇಳಿಕೆ ಳ್ಳುವುದು ಬೇಡ ಮೂಗಿಗೆ ತುಪ್ಪ ಹಚ್ಚಿದರೆ ವಾಸನೆ ಬರುತ್ತದೆ ಅಷ್ಟೆ. ನೂರು ರೂಪಾಯಿಗೆ ಪಟ್ಟಾ ಕೊಟ್ಟು ತುಪ್ಪ ಹಚ್ಚುವ ಕೆಲಸ ನಿಜವಾಗಿಯೂ ಸಣ್ಣ ರೈತರಿಗೆ ಅನುಕೂಲವಾಗುವುದಿಲ್ಲ. ಇದರಿಂದ ಮುಂದೆ ಇನ್ನೂ ಏನೂ ಕೊಡುವುದು ಬೇಡವೆಂದು ಅರ್ಥವಾಗುತ್ತದೆ. ಸುಮಾರು ೩೫–೪೫ ಕೋಟಿ ರೂಪಾಯಿಗಳು ಒಟ್ಟು ಹಣವನ್ನು ರಾಜ್ಯ ಸರ್ಕಾರದವರು ಕೊಡಬೇಕಾಗಿರುತ್ತದೆ. ಅಂದರೆ ಸುಮಾರು ಆರು ಲಕ್ಷ ಮನೆತನಗಳಿಗೆ ಸಹಾಯ ಮಾಡುವುದಕ್ಕೋಸ್ಕರ ೪೦ ಕೋಟಿ ರೂಪಾಯಿಗಳನ್ನು ಸರ್ಕಾರದ ಖಜಾನೆಯಿಂದ ಕೊಡಬೇಕಾಗಿರುತ್ತದೆ. ಇದರಿಂದ ಏನಾಗುತ್ತದೆಂದರೆ ಭೂಮಾಲೀಕರಿಗೆ ಪರಿಹಾರ ಕೊಡುತ್ತೇವೆಂದು ಹೇಳಿ, ತೀರ್ಮಾನ ಮಾಡಿ ಅವರನ್ನು ರಸ್ತೆಯಲ್ಲಿ ತಳ್ಳಿ, ರೈತರಿಗೆ ಸಹಾಯ ಮಾಡಿದಂತಾಗುತ್ತದೆ. ಸರ್ಕಾರದವರಿಂದ ನೂರು ರೂಪಾಯಿಕೊಟ್ಟು ಪಟ್ಟಾ ಮಾಡಿಕೊಂಡಮೇಲೆ ಬ್ಯಾಂಕ್‌ಗಳಿಗೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಗೆ ಡೀಡ್ ಮಾಡಿ ಸಾಲವನ್ನು ತೆಗೆದುಕೊಳ್ಳುವ ಉದಾರತೆಯನ್ನು ತೋರಿಸಿರುವುದು ಯಾವ ಒಂದು ಸುಧಾರಣೆಯು ಅಂಶವೂ ಅಲ್ಲ. ಒಂದು ಗಾದೆ ಹೇಳುತ್ತಾರೆ, "ಕುರುಡುಗಣ್ಣಿಗಿಂತ ಮೇಲ್‌ಗಣ್ಣು ಮೇಲು" ಎಂದು ಆ ರೀತಿ ಕಾನೂನು ಮಾಡಿ ಸುಮ್ಮನೆ ಕಣ್ಣು ಒರೆಸುವುದರಿಂದ ಹೃತ್ಪೂರ್ವಕವಾಗಿ ರೈತನ ಏಳಿಗೆ ಮಾಡಿದಂತಾಗುವುದಿಲ್ಲ. ಮಾನ್ಯ ಬಂಗಾರಪ್ಪನವರು ತೀವ್ರ ಆಲೋಚನೆ ಮಾಡಬೇಕು. ಕೇಂದ್ರದಲ್ಲಿ ನಿಮ್ಮ ಸರ್ಕಾರವೇ ಇರುತ್ತದೆ ದಿನಬೆಳಗಾದರೆ ಬಡರೈತರಿಗೆ, ಕೂಲಿಗಾರರಿಗೆ ಇರತಕ್ಕಂಥ ಸಮಸ್ಯೆಗಳ ಬಗ್ಗೆ ದೊಡ್ಡ ದೊಡ್ಡ ಘೋಷಣೆಯನ್ನು ಹೊರಡಿಸುತ್ತಿದ್ದೀರಿ. ನಲವತ್ತು ಕೋಟಿ ರೂಪಾಯಿಗಳ ಜೊತೆಗೆ ಕೇಂದ್ರ ಸರ್ಕಾರದವರಿಂದಲೂ ಸ್ವಲ್ಪ ಹಣವನ್ನು ಪಡೆದರೆ ಬಹುಭಾಗ ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುತ್ತದೆ. ನಿಜಕ್ಕೂ ನೀವು ಪ್ರಯತ್ನ ಮಾಡಿದರೆ ನಿಮ್ಮ ಮಾತಿನಲ್ಲಿ ಸತ್ಯಾಂಶವಿದೆ ಎನ್ನುವ ಮಾತನ್ನು ಹೇಳಿ ಈ ಮಸೂದೆಗೆ ಬೆಂಬಲಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ ಈ ಒಂದು ಮಸೂದೆಯ ನೀತಿಯ ಬಗ್ಗೆ ನನಗುಂಟಾಗಿರುವ ಸಮಸ್ಯೆಯ ನಿವಾರಣೆಗೆ ಸರ್ಕಾರದಿಂದ ಉತ್ತರ ಪಡೆಯುವುದಕ್ಕೋಸ್ಕರವಾಗಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸಮಗ್ರ ಭೂ ಸುಧಾರಣಾ ಕಾನೂನು ತಂದಾಗ ಈ ಸದನ ಅವಿರೋಧವಾಗಿ ಮಂಜೂರಾತಿಯನ್ನು ಕೊಟ್ಟಿದ್ದು ತಮಗೂ ಜ್ಞಾಪಕ ಇರಬಹುದು. ನಾನು ಈ ಮಾತನ್ನು ಹೇಳುವಾಗ ತಪ್ಪಾಗಿ ಭಾವಿಸಿಕೊಳ್ಳಬಾರದೆಂದು ಹೇಳುತ್ತಾ ಈ ತಿದ್ದುಪಡಿ ಮಸೂದೆಯಲ್ಲಿರತಕ್ಕಂಥ ದೋಷಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ತಮ್ಮ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಏನು ಹೇಳಿದ್ದೀರಿ ಎಂದರೆ "This would facilitate them to obtain financial assistance for the development of their land and for agricultural operations" ನೀವು ಒಂದುನೂರು ರೂಪಾಯಿಗಳಿಗೆ ಪಟ್ಟಾ ಕೊಟ್ಟು ಗೇಣಿದಾರನು ಪಟ್ಟಾ ಪಡೆದ ಮೇಲೆ ಆತನು ಆರ್ಥಿಕ ಸಹಾಯವನ್ನು ಕೊಡತಕ್ಕಂಥ ಬ್ಯಾಂಕ್ ಅಥವಾ ಸಂಸ್ಥೆಗಳಿಂದ ಹಣ ಸಹಾಯವನ್ನು ಪಡೆದು ವ್ಯವಸಾಯ ಮಾಡಬಹುದೆಂದು ಹೇಳಿರುತ್ತೀರಿ. ನಿಮ್ಮ ಕಾನೂನು ಸೆಕ್ಷನ್ ೫೩ರಲ್ಲಿ ಅಳವಡಿಸಿರತಕ್ಕಂಥಾದ್ದು ಏನು ಎಂದರೆ, ಪ್ರಿಮಿಯಮ್ ೨೦ ವರ್ಷಗಳು ಕಟ್ಟಬೇಕಾಗಿರತಕ್ಕಂಥಾದ್ದನ್ನು ಮೂರು ವರ್ಷಗಳು ಕಟ್ಟದೆ ಡಿಫಾಲ್ಟರ್ ಆದರೆ ಲ್ಯಾಂಡ್‌ನು ರೆಸ್ಯೂಮ್ ಮಾಡುತ್ತೇವೆಂದು ಹೇಳಿದ್ದೀರಿ. ೧೦೦ ರೂ. ಕೊಟ್ಟರೆ ಪಟ್ಟಾ ಕೊಡುತ್ತೀರಿ, ಅವನು ಪ್ರೀಮಿಯಮ್ ಹಣವನ್ನು ಕೊಡುವುದರಲ್ಲಿ ಡಿಫಾಲ್ಟರ್ ಆದರೆ, ಈ ಮಧ್ಯೆ ಭೂಮಿಮೇಲೆ ಹಣವನ್ನು ಸಂಬಂಧಪಟ್ಟ ಬ್ಯಾಂಕುಗಳಿಂದ ಬೇರೆ ಬೇರೆ ಯಾವುದೋ ಸಂಸ್ಥೆಗಳಿಂದ ಹಣಪಡೆದಿರುತ್ತಾನೆ, ಆತನು ಹಣ ಪಡೆದ ಮೇಲೆ ಅಗ್ರಿಕಲ್ಚರ್ ಪರ್‌ಪಸ್‌ಗೆ ಉಪಯೋಗ ಮಾಡಿರುತ್ತಾನೋ ಇಲ್ಲವೋ ಅದು ಬೇರೆ ವಿಚಾರ, ಎನ್‌ಕಂಬರೆನ್ಸ್ ಸಾಲವನ್ನು ನೀವೇ ಹೊತ್ತುಕೊಳ್ಳ ಬೇಕಾಗುತ್ತದೆ.

"The landis going to be resumed in case he is going to be a defaulter for the subsequent 3 years.........If the tenant fails to pay the premium as per Section 53 or at any time is in arrears of three instalments, the land shall be ineffective and the land shall be at the disposal of the State Government."

೧೦೦ ರೂಪಾಯಿಗಳನ್ನು ಕೊಟ್ಟು ಪಟ್ಟಾ ಪಡೆದಮೇಲೆ, ಭೂಮಿಗೆ ಅವನು ಮಾಲೀಕನಾದಮೇಲೆ ಸರ್ಕಾರಕ್ಕೆ ಕೊಡಬೇಕಾದಂಥ ಹಣವನ್ನು ಕೊಡುವ ಮಧ್ಯೆ ಭೂಮಿಮೇಲೆ ಸಾಲವನ್ನು ಮಾಡುತ್ತಾನೆ, ಹೀಗೆ ಸಾಲ ಮಾಡಿದ ಹಣ ಯಾವ ಪರ್‌ಪಸ್‌ಗಾದರೂ ಮಾಡಿರಬಹುದು. ಭೂ ಅಭಿವೃದ್ಧಿಗಾದರೂ ಮಾಡಿರಬಹುದು ಅಥವಾ ಬೇರೆಯಾವುದಕ್ಕಾದರೂ ಮಾಡಿರಬಹುದು, ಈ ಸಾಲದ ಹಣವನ್ನು ಎಲ್ಲ ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ, ಆಗ ನಿಮ್ಮ ಪರಿಸ್ಥಿತಿ ಏನು ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇದರ ಸಾದಕಬಾದಕ ಯೋಚನೆ ಮಾಡಿ ಲಾ ಡಿಪಾರ್ಟ್‌ಮೆಂಟ್‌ನವರು ಏನು ಹೇಳುತ್ತಾರೆ. ಸಂಬಂಧಪಟ್ಟ ಡಿಪಾರ್ಟ್‌ಮೆಂಟ್‌ನವರು ಯಾವ ರೀತಿ ಸರ್ಕಾರಕ್ಕೆ ಸೂಚನೆ ಕೊಡುತ್ತಾರೆ ಅದನ್ನೂ ನೋಡಬೇಕಾಗುತ್ತದೆ.

೪-೩೦ ಪಿ. ಎಂ.

ಆದುದರಿಂದ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಪಕ್ಕದಲ್ಲಿ ಕುಳಿತು ಕೊಂಡಿರುವ ನನ್ನ ಸಹೋದ್ಯೋಗಿಗಳೂ ಈ ಬಗ್ಗೆ ಹೆಚ್ಚು ಹೇಳಿದ್ದಾರೆ. ಈ ವಿಧೇಯಕದಲ್ಲಿ ಸಂಪೂರ್ಣ ವಿಷಯ ಇದೆ. ಅವರ ಸಿನ್ಸಿಯಾರಿಟಿ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ನಾನ ಯೋಚನೆ ಮಾಡಿದ್ದೇನೆ. ರಾಜಕೀಯ ಪಕ್ಷ ಇದರ ಬಗ್ಗೆ ಮಹತ್ವವಾಗಿ ಯೋಚನೆ ಮಾಡಬೇಕು. ದೇಶದಲ್ಲಿರುವ ಎಲ್ಲಾ ಟೆನೆಂಟ್ಸ್ ಬಡವರೆಂದು ಭಾವಿಸಬಾರದು. ಅದು ತಪ್ಪು. ಎಲ್ಲಾ ಭೂಮಾಲೀಕರೂ ಸಹ ಶ್ರೀಮಂತರೆಂದು ಹೇಳಿದರೆ ಅದೂ ತಪ್ಪಾಗುತ್ತದೆ. ಕೆಲವು ಭೂಮಾಲೀಕರು ಇಂದು ಬೀದಿ ಭಿಕಾರಿಗಳಾಗಿರುವುದನ್ನು ನಾವು ನೋಡುತ್ತಿದ್ದೇವೆ. ಎಷ್ಟೋ ಜನ ಗೇಣಿದಾರರು ೧೦-೧೫ ಎಕರೆ ಒಳ್ಳೆಯ ಜಮೀನನ್ನು ಇಟ್ಟುಕೊಂಡು ದೊಡ್ಡ ಭೂಮಾಲೀಕರಾಗಿದ್ದಾರೆ. ಆಡಳಿತ ಪಕ್ಷದವರು ಎಲ್ಲಿಯವರೆಗೆ ಜನರು ದಡ್ಡರಾಗಿಯೇ ಇರುತ್ತಾರೆಯೋ ಅಲ್ಲಿಯವರೆಗೆ ರಾಜ್ಯವನ್ನು ಆಳುತ್ತಾರೆ. ಹಿಂದುಳಿದವರು, ಆವರ್ಗದವರು ಈ ವರ್ಗದವರೆಂದು ವಿಂಗಡನೆ ಮಾಡಿ ಓಟುಗಳನ್ನು ಪಡೆದು ಅಧಿಕಾರ ವಹಿಸಿಕೊಳ್ಳುತ್ತಾರೆ. ನಮ್ಮ ಜಿಲ್ಲೆಯಲ್ಲಿಯೂ ಮುಂದುವರಿದವರು ಇದ್ದಾರೆ. ತಪ್ಪು ಅದು ಅಲ್ಲ. ಓಟಿಗೋಸ್ಕರವಾಗಿ ಹಿಂದುಳಿದವರು ಎಂದು ಹೇಳಿ ಓಟು ಪಡೆದು ನೀವು ಆ ಕಡೆ ಬಂದು ಕುಳಿತಿದ್ದೀರಿ. ಈ ಸಮಯದಲ್ಲಿ ನಾವು ಆರ್ಥಿಕವಾಗಿ ಯೋಚನೆ ಮಾಡಬೇಕು. ಇಂದು ಎಷ್ಟೋ ಜನ ಭೂಮಾಲೀಕರು ತಮ್ಮ ಜಮೀನನ್ನು ಕಳೆದುಕೊಂಡು ಬೀದಿಯಲ್ಲಿದ್ದಾರೆ. ಇದಕ್ಕೆ ಒಂದು ನಿದರ್ಶನವನ್ನು ಕೊಡಬೇಕಾಗಿದೆ. ಒಬ್ಬ ಹೆಣ್ಣು ಮಗಳು ತನ್ನ ಜಮೀನನ್ನು ಕಳೆದುಕೊಂಡು ತನ್ನ ಶರೀರವನ್ನು ಮಾರಿಕೊಂಡು ಜೀವನ ಮಾಡತಕ್ಕ ಪರಿಸ್ಥಿತಿ ಬಂದಿದೆ. ಇಂತಹದ್ದನ್ನು ನಾವು ಇಂದು ನೋಡುತ್ತಿದ್ದೇವೆ. ಅಂತಹವರ ಬಗ್ಗೆ ಇಂದು ಕಳಕಳಿ ಇಲ್ಲ. ಈಗ ಡೆವಲಪ್‌ಮೆಂಟ್ ವರ್ಕ್ಸ್ ಎಲ್ಲವನ್ನೂ ನಿಲ್ಲಿಸೋಣ. ಇದರಿಂದ ಏನೂ ಆಗುವುದಿಲ್ಲ. ೩೨ ವರ್ಷಗಳಿಂದ ಡೆವಲಪ್‌ಮೆಂಟ್ ಆಗಿದ್ದು ಅಷ್ಟರಲ್ಲಿಯೇ ಇದೆ. ನಾನು ಗುಲ್ಬರ್ಗಾಗೆ ಹೋಗಿದ್ದೆ. ಅಲ್ಲಿ ಅನೇಕ ಮಂತ್ರಿಗಳು ಇದ್ದರು. ಮಾನ್ಯ ಮುಖ್ಯಮಂತ್ರಿಯವರೂ ಇದ್ದರು. ಮೊನ್ನೆ ನಡೆದ ಚುನಾವಣೆಯಲ್ಲಿ ೧೬ ಮತಗಟ್ಟೆಗಳಲ್ಲಿ ಜನರು ಓಟಿಂ ಮಾಡಲಿಲ್ಲ. ಅವರಿಗೆ ಸರ್ಕಾರ ಯಾವ ಅನುಕೂಲತೆಯನ್ನೂ ಮಾಡಿಲ್ಲವೆಂದು ಅವರು ಓಟನ್ನೇ ಹಾಕುವುದಕ್ಕೆ ಬರಲಿಲ್ಲ. ಯಾವ ಭೂಮಾಲೀಕರು ಇಂದು ತಮ್ಮ ಜೀವನ ಮಾಡಲು ಯಾವ ವೃತ್ತಿಯೂ ಇಲ್ಲದೆ, ಕಡು ಬಡತನದಲ್ಲಿದ್ದಾರೆ ಅವರಿಗೆ ಸಹಾಯ ಮಾಡಿ. ಅವರಿಗೆ ಏಕ ಗಂಟಿನಲ್ಲಿ ಹಣವನ್ನು ಕೊಡಿ. ನಾನು ಬೇಡ ಎಂದು ಹೇಳುವುದಿಲ್ಲ. ಗೇಣಿದಾರರು ಯಾರು ಆರ್ಥಿಕವಾಗಿ ಸಫಲರಾಗಿದ್ದಾರೆ ಅಂಥವರಿಗೆ ರಿಯಾಯಿತಿ ಕೊಡಬೇಕೆಂದು ನಾನು ಹೇಳುವುದಿಲ್ಲ. ನಾನೂ ಕೂಡ ಭೂ ನ್ಯಾಯ ಮಂಡಲಿಯಲ್ಲಿ ಒಬ್ಬ ನ್ಯಾಯಾಧೀಶ ಈ ಮಂಡಲಿಯಲ್ಲಿ ನಾನೂ ಎರಡು ಬಾರಿ ಮೀಟಿಂಗ್ ಅಟೆಂಡ್ ಮಾಡಿ ಕುಳಿತು ನೋಡಿದ್ದೇನೆ.

ಸ್ವಾಮಿ, ಈ ದಿನ ಅನೇಕ ಗೇಣಿದಾರರು ನಮ್ಮ ಊರಿನಲ್ಲಿಯೂ ಇದ್ದಾರೆ. ಬಹುಶ: ನನ್ನ ಸಮಾಜಕ್ಕೆ ಸೇರತಕ್ಕಂತಹ ಜನ ೧೦೦ಕ್ಕೆ ೯೫ ಜನರು ಇದ್ದಾರೆ. ಅವರಲ್ಲಿ ಒಬ್ಬೊಬ್ಬರಿಗೆ ೮—೧೦—೧೫ ಎಕರೆ ವೆಟ್ ಲ್ಯಾಂಡ್ ಇದೆ. ಯಾರ ಭೂಮಿಯನ್ನು ಕಿತ್ತುಕೊಂಡು ಅವರಿಗೆ ಕೊಟ್ಟಿದ್ದಾರೆ? ಅವರು ಬ್ರಾಹ್ಮಣರಾಗಿರಬಹುದು, ಜೈನರಾಗಿರಬಹುದು, ಅಥವಾ ಮುಸ್ಲಿಮರಾಗಿರಬಹುದು, ಅವರಿಗೆ ಇಂದು ಜೀವನ ಮಾಡುವುದಕ್ಕೆ ಏನೂ ಇಲ್ಲ. ಇವರಲ್ಲಿ ಒಬ್ಬ ಮುಸ್ಲಿಮ್ ಮಹಿಳೆ ರಾಷ್ಟ್ರಪತಿಗಳವರಿಗೂ

ಸಹಾ ಕಾಗದವನ್ನು ಬರೆದು ತನ್ನ ದುಃಖವನ್ನು ತೋಡಿಕೊಂಡಿದ್ದಾಳೆ. ಅವಳು ಕಡು ಬಡವಳು. ಅವಳಿಗೆ ೧೨ ಮಕ್ಕಳು ಇವೆ. ಈ ರೀತಿಯ ಕಾನೂನನ್ನು ಮಾಡಿದ್ದೀರ ಇವತ್ತು ಎಲ್ಲಾ ಗೇಣಿದಾರರೂ ಬಡವರೆಂದು ಭಾವಿಸಬಾರದು. ಯಾರಿಗೆ ಬದುಕುವುದಕ್ಕೆ ಅರ್ಧ ಎಕರೆ, ಎರಡು ಎಕರೆ ಜಮೀನಿಲ್ಲದೆ, ಬೇರೆ ಯಾವ ಆದಾಯದ ಮೂಲ ಇಲ್ಲವೋ ಅಂತಹವರಿಗೆ ಕೊಡಿ ಅವರಿಗೆ ೧೦೦ ರೂಪಾಯಿಯ ಬದಲಿಗೆ ೧೦ ರೂಪಾಯಿಗೆ ನಾರ್ಮಲ್‌ರೇಟ್‌ನಲ್ಲಿ ಕೊಡಿ ಬೇಡ ಎಂದು ಹೇಳುವುದಿಲ್ಲ. ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಒಂದು ವರ್ಷ ತಡೆಹಿಡಿಯಿರಿ. ಕೇಂದ್ರ ಸರ್ಕಾರ ಅದಕ್ಕೆ ಒಪ್ಪುವುದಿಲ್ಲ ೧೯೭೪ ರಲ್ಲೀ ಸುಮಾರು ೪೨ ಕೋಟಿ ರೂಪಾಯಿಯ ಒಂದು ಪರಿಹಾರ ಹಣವನ್ನು ಕೊಡಬೇಕೆಂದು ಶ್ರೀ ಮತಿ ಇಂದಿರಾಗಾಂಧಿಯವರು ಪ್ರಧಾನಿಯಾಗಿದ್ದಾಗ ತರಲಾಯಿತು. ಅದನ್ನು ಆಗಿನ ಪ್ರಧಾನಿಗಳು ತಡೆ ಹಿಡಿದರು. ಆದುದರಿಂದ ಇವತ್ತು ನಾನು ಕೇಂದ್ರದಿಂದ ಹಣ ಬರುತ್ತದೆಂದು ಹೇಳಿ ಒಂದು ರೀತಿ ನುಣುಚಿಕೊಳ್ಳುವಂತೆ ಆಗಬಾರದು. ನಾವು ಸರ್ಕಾರಿ ನೌಕರರಿಗೆ ೫-೧೦ ಕೋಟಿ ರೂಪಾಯಿ ಇಡತಕ್ಕ ಬೇಡಿಕೆಗೆ ಮಾನ್ಯತೆ ಮಾಡುತ್ತೇವೆ. ಈ ನತದೃಷ್ಟ ಸಣ್ಣ ಸಣ್ಣ ಭೂಮಾಲೀಕರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಬೇಕಾಗಿದೆ. ಈ ಬಗ್ಗೆ ೧೫ ಕೋಟಿ ಅಲ್ಲ ೧೦೦ ಕೋಟಿ ಆಗಬಹುದು. ಯಾವುದೇ ವರ ಮಾನ ಇಲ್ಲದ ಇಂತಹವರಿಗೆ ಹಣ ಕೊಡಿ ಎಂದು ಹೇಳುತ್ತಿದ್ದೇನೆ. ಈಗಿನ ಅಭಿವೃದ್ಧಿ ಕಾರ್ಯಗಳು ನಿಲ್ಲಲಿ ಸ್ವತಂತ್ರ ಬಂದು ೩೨ ವರ್ಷಗಳಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳು ಸಾಕು. ಇವನ್ನು ನಿಲ್ಲಿಸಿದರೆ ಪ್ರಪಂಚವೇನೂ ಮುಳುಗಿ ಹೋಗುವುದಿಲ್ಲ. ತಾವು ಈ ದಿನ ಇಂತಹ ಒಂದು ಮಸೂದೆಯನ್ನು ತರುವ ಮುಖೇನ ತಾವು ಏನೋ ದೊಡ್ಡ ಸಾಧನೆಯನ್ನು ಮಾಡಿದ್ದೀರೆಂದು ಭಾವಿಸಬಾರದು. ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಯಾರು ಭೂಮಿ ಇಲ್ಲದೆ ಇದ್ದಾರೆ, ಯಾರಿಗೆ ವಯಸ್ಸು ಆಗಿದೆ ಅವರಿಗೆ ವೃದ್ಧಾಪ್ಯ ವೇತನ ಕೊಡಿ ಎಂದು ಅವರಿಗೆ ಹೇಳಿದ್ದೇನೆ. ಇದು ಒಳ್ಳೆಯ ಸಲಹೆ, ಇದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿ ಅಧಿಕಾರದಿಂದ ಹೊರಗೆ ಬಂದಿದ್ದಾರೆ. ಈಗ ನೀವು ಅದನ್ನು ಮಾಡಿ. ಈ ಕಾನೂನನ್ನು ಮಾನ್ಯತೆ ಮಾಡುವುದರಿಂದ ಬರಬಹುದಾದ ತೊಡಕಿನ ಬಗ್ಗೆ ನೀವು ಯೋಚನೆ ಮಾಡಿ. ತಾವು ಅವರಿಗೆ ಪಟ್ಟ ಕೊಡಿ. ಆ ಮೇಲೆ ಅಧಿಕಾರಿಗಳಿಗೆ ಸಲಹೆಯನ್ನು ಮಾಡಿ. ಅವರು ಯಾವ ಉದ್ದೇಶಕ್ಕಾಗಿ ಅದನ್ನು ಉಪಯೋಗ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಅದನ್ನು ನೋಡಿಕೊಳ್ಳತಕ್ಕ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಆ ಹಣ ದುರುಪಯೋಗ ಆಗಬಹುದು. ಅವರಿಗೆ ಪುಕ್ಕಟೆಯಾಗಿ ಭೂಮಿ ಕೊಡಿ. ನಾಗುವಳಿಗೆ ಹಣ ಕೊಡಿ. ಅದನ್ನು ಅವರು ವಾಪಸ್ ಕೊಡದಿದ್ದ ಪಕ್ಷದಲ್ಲಿ ಅವರ ಲಯಬಿಲಿಟೀಸ್‌ನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನೀವು ಅವನ್ನು ಬೇರೆ ಬೇರೆಯಾಗಿ ಮಾಡತಕ್ಕ ಅವಕಾಶ ಇಲ್ಲವೆಂದು ಹೇಳಿದ್ದೀರಿ. ಆದರೆ, ಅವರು ಹಣವನ್ನು ವಾಪಸ್ ಕೊಡದೇ ಇದ್ದರೆ ಭೂಮಿಯನ್ನು ವಾಪಸ್ ಪಡೆಯಬಹುದು. ತಾವು ಇದರ ಬಗ್ಗೆ ಸಾಕಷ್ಟು ಅರ್ಥ ಮಾಡಿಕೊಂಡು, ನಾನು ವ್ಯಕ್ತಪಡಿಸಿರತಕ್ಕ ಸಂಶಯಗಳು ಏನಿವೆ ಅವನ್ನು ಮುಂಜಾಗ್ರತೆಯಾಗಿ ಆಲೋಚನೆ ಮಾಡುತ್ತೀ ರೆಂದು ನಾನು ಭಾವಿಸಿಕೊಳ್ಳುತ್ತೇನೆ.

ಶ್ರೀ ಜಿ. ರಾಜೂಗೌಡ (ಹಾಸೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಈ ಸದನದ ಮುಂದೆ ಮಂಡಿಸಿರತಕ್ಕಂತಹ ಭೂ ಸುಧಾರಣ ಕಾಯಿದೆಗೆ ತಂದಿರತಕ್ಕಂತಹ ತಿದ್ದುಪಡಿ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವು ದಕ್ಕೆ ಇಷ್ಟಪಡುತ್ತೇನೆ. ಹಿಂದೆ ಇದೇ ಭೂಸುಧಾರಣ ಕಾಯಿದೆಯ ಪ್ರಕಾರ ೧-೩-೧೯೭೪ರಲ್ಲಿ ಯಾವ ಒಂದು ಜಮೀನು ಗೇಣಿಗೆ ಒಳಪಡುತ್ತದೋ ಅಂತಹ ಜಮೀನು ಸರ್ಕಾರಕ್ಕೆ ಸೇರಿದ್ದು ಎನ್ನುವ ವಿಷಯ ಅಡಕವಾಗಿದೆ. ಆ ವಿಷಯ ಅಡಕವಾಗಿರತಕ್ಕಂತಹ ಕಾಲದಲ್ಲಿ ನಮ್ಮ ವಿರೋಧ ಪಕ್ಷದ ಮಿತ್ರರು ಹೇಳು ತ್ತಿದ್ದರು, ದೊಡ್ಡ ದೊಡ್ಡ ಭೂಮಾಲೀಕರಿಂದ ಇರತಕ್ಕಂತಹ ಭೂಮಿಯನ್ನು ಕಸಿದುಕೊಂಡು ಸರ್ಕಾರವೆ ದೊಡ್ಡ ಭೂಮಾಲೀಕನಾಗುವುದಕ್ಕೆ ಹೊರಟಿದೆ ಎಂಬುದಾಗಿ ಹೇಳುತ್ತಿದ್ದರು. ಇಂದು ಕೂಡ ಅದೇ ಧಾಟಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ಸಣ್ಣ ಪುಟ್ಟ ಗೇಣಿದಾರರಿಗೆ ಭೂ ಮಾಲೀಕತ್ವವನ್ನು ಕೊಡ ಬೇಕೆಂಬ ಸದುದ್ದೇಶದಿಂದ ಈ ಒಂದು ಬಿಲ್ಲನ್ನು ತಂದಿದೆ ಗೇಣಿದಾರ ೧೦೦ ರೂಪಾಯಿಗಳನ್ನು ಪಾವತಿ ಮಾಡಿದರೆ ಆ ಭೂಮಿಯ ಮಾಲೀಕತ್ವದ ಹಕ್ಕುಪತ್ರವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಅವನು ೧೦೦ ರೂಪಾಯಿಗಳನ್ನು ಕೊಟ್ಟು ಹಕ್ಕುಪತ್ರವನ್ನು ತೆಗೆದುಕೊಂಡರೆ, ಅದನ್ನು ಅತನು ಬ್ಯಾಂಕು ಗಳಿಗೆ ಕೊಟ್ಟು ಅಭಿವೃದ್ಧಿಗಾಗಿ ಸಾಲ ಸೌಲಭ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಮಾನ್ಯ

ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ಸೌಲಭ್ಯ ೫ ಎಕರೆಗಿಂತ ಕಡಿಮೆ ಖುಷ್ಕಿ ಜಮೀನು ಇರತಕ್ಕಂತಹವರಿಗೆ ಅನ್ವಯಿಸುತ್ತದೋ ? ಅಥವಾ ಬೇರೆಯವರಿಗೂ ಅನ್ವಯಿಸುತ್ತದೋ ಎಂಬುದನ್ನು ತಿಳಿಸಬೇಕು. ಗೇಣಿದಾರನು ೧೦೦ ರೂಪಾಯಿಗಳನ್ನು ಪ್ರಾರಂಭದಲ್ಲಿ ಕೊಡಬೇಕೆಂಬ ಅಂಶದ ಬಗ್ಗೆ ೨೦ ಎಕರೆ ಇರುವವನಿಗೂ ೧೦೦ ರೂಪಾಯಿ ಕೊಟ್ಟರೆ ಸಾಕೆ ? ಎಂಬುದನ್ನು ತಿಳಿಸಬೇಕು. ಭೂನ್ಯಾಯ ಮಂಡಳಿಯ ಮುಂದೆ ಒಬ್ಬ ಗೇಣಿದಾರ ೧೦೦ ಪ್ರಕರಣದಲ್ಲಿ ಅರ್ಜಿಯನ್ನು ಕೊಟ್ಟಿರುತ್ತಾರೆ. ಅದರಲ್ಲಿ ಒಂದು ಪ್ರದೇಶದಲ್ಲಿ ೩ ಎಕರೆ ಇರುತ್ತದೆಂದು ಇಟ್ಟುಕೊಳ್ಳೋಣ, ಆ ಪ್ರಕರಣ ಇತ್ಯರ್ಥವಾಗುತ್ತದೆಂದು ಇಟ್ಟುಕೊಳ್ಳೋಣ, ಆದರೆ ಆತನು ಕಟ್ಟತಕ್ಕಂತಹ ೧೦೦ ರೂಪಾಯಿ ಹಣ ಆತನ ಮೇಲೆ ಇರತಕ್ಕಂತಹ ೧೦೦ ಪ್ರಕರಣಕ್ಕೂ ಅನ್ವಯವಾಗುತ್ತದೆಯೇ ? ಎಂಬುದನ್ನು ದಯಮಾಡಿ ತಿಳಿಸಬೇಕು.

ಮೂರನೆಯದಾಗಿ ಒಬ್ಬ ಗೇಣಿದಾರ ತನಗೆ ಬಂದಿರತಕ್ಕಂತಹ ೩ ಎಕರೆ ಭೂಮಿಯನ್ನು ಪರಭಾರೆ ಮಾಡಬಾರದು ಎಂಬುದಾಗಿ ಇದೆ. ಆದರೆ ಆತನು ಎಲ್ಲಿಯಾದರೂ ಆ ಜಮೀನಿನ ಮೇಲೆ ಸಾಲವನ್ನು ತೆಗೆದುಕೊಳ್ಳಬೇಕಾದರೆ ಹಕ್ಕುಪತ್ರ ಇರಲೇ ಬೇಕಾಗುತ್ತದೆ. ಈಗ ತಾವು ತಂದಿರತಕ್ಕಂತಹ ಭೂ ಸುಧಾರಣ ವಿಧೇಯಕ ಸರ್ವ ವಿಧದಲ್ಲೂ ಸಮಂಜಸವಾಗಿದೆ. ಸಣ್ಣ ಗೇಣಿದಾರರಿಗೆ ಇದರಿಂದ ಅನುಕೂಲವಾಗುತ್ತದೆ. ಹರಿಜನ–ಗಿರಿಜನ ಇನ್ನೂ ಬಡವರಿಗೆ ಉಚಿತವಾಗಿ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟನ್ನು ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ವಿಟ್ಲ್).—ಮಾನ್ಯ ಅಧ್ಯಕ್ಷರೆ, ಈ ಒಂದು ವಿಧೇಯಕಕ್ಕೆ ನಾನು ಹೋದ ಸಲವೂ ಬೆಂಬಲ ಕೊಟ್ಟವನೆ. ಅಂದಿನ ಸರ್ಕಾರ ಇದನ್ನು ಒಂದು ಆರ್ಡಿನೆನ್ಸ್ ರೂಪದಲ್ಲಿ ತಂದಿತ್ತು. ಈಗ ವಿಧೇಯಕ ತಂದಿದ್ದಾರೆ ಬಹಳ ಸಂತೋಷ. ಇದರಲ್ಲಿ ಮುಖ್ಯ ವಿಚಾರವೇನೆಂದರೆ, ನಾವು ಗೇಣಿದಾರರಿಗೆ ಪಟ್ಟ ಎಂದು ಹೇಳಿ ಅನುಭೋಗದ ಹಕ್ಕು ಮಾತ್ರ ಕೊಟ್ಟರೆ ಸಮಂಜಸವಾಗಲಾರದು ಎಂದು ನನಗನ್ನಿಸುತ್ತದೆ, ಮಾನ್ಯ ಜೆ. ಹೆಚ್. ಪಟೇಲ್‌ರವರು ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಭೂಮಿಯ ಒಡೆತನವನ್ನು ಈ ಒಂದು ಶಾಸನದಲ್ಲಿ ಅವರಿಗೆ ಕೊಡುತ್ತಿಲ್ಲ. ಭೂಮಿಯ ಮಾಲೀಕತ್ವವನ್ನು ಕೊಡುವಂತಹ ಕ್ರಮ ಇದರಲ್ಲಿ ನೀವು ಕೈಗೊಳ್ಳುತ್ತಿಲ್ಲ. ಇದರಲ್ಲಿ ನಾವು ಅವರಿಗೆ ಬರೀ ಹಕ್ಕುಪತ್ರವನ್ನು ಕೊಟ್ಟು ಅನುಭೋಗದಾರನೆಂದು ಮಾಡುತ್ತೇವೆ ಷ್ಟೇ. ಆತನಿಂದ ೧೦೦ ರೂಪಾಯಿ ತೆಗೆದುಕೊಂಡು ಸರ್ಟಿಫಿಕೆ ಟ್ ಕೊಡುವುದಕ್ಕೆ ಇದರಲ್ಲಿ ಅನುಕೂಲ ಮಾಡಿಕೊಟ್ಟಿದ್ದೀರಿ. ಮಾಲೀಕತ್ವದ ಹಕ್ಕನ್ನು ಕೊಡತಕ್ಕಂತಹ ಸೂಚನೆ ಇದರಲ್ಲಿ ಇಲ್ಲ ಅದನ್ನು ಕೊಟ್ಟ ಮೇಲೆ ಆತನು ಏನು ಮಾಡಬಹುದೆಂದು ತಾವು ಕಲ್ಪನೆ ಮಾಡಿದ್ದೀರಾ ? ಈ ತಿದ್ದುಪಡಿ ಮಸೂದೆಯಿಂದ ಆತನನ್ನು ಭೂಮಿಯ ಮಾಲೀಕನನ್ನಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಪಟ್ಟಾವನ್ನು ಕೊಟ್ಟರೆ, ಅದೇ ಅವನಿಗೆ ಅನುಭೋಗದಾರನಾಗುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—" ಪಟ್ಟ " ಎಂದು ಇದರಲ್ಲಿ ಕೊಡುವುದಿಲ್ಲ. ಅದನ್ನೇ ನಾನು ಹೇಳುತ್ತಿರುವುದು. ಅನುಭೋಗದಾರಿಯ ಹಕ್ಕಿನ ಸಂಬಂಧದಲ್ಲಿ ೧೦೦ ರೂಪಾಯಿಗಳನ್ನು ತೆಗೆದುಕೊಂಡು ಸರ್ಟಿಫಿಕೇಟ್ ಕೊಡುತ್ತಿದ್ದೇವೆ ಅಷ್ಟೇ. ಮೂಲತತ್ವದ ಪಟ್ಟವನ್ನು ಕೊಡುವುದಕ್ಕೆ ಇಡೀ ಭೂ ಸುಧಾರಣ ಕಾಯಿದೆಯಲ್ಲೇ ಅವಕಾಶ ಇಲ್ಲ. ಅದನ್ನು ಸರ್ಕಾರವೂ ಹೇಳುತ್ತಿಲ್ಲ. ಸರ್ಟಿಫಿಕೇಟನ್ನು ಪಡೆಯುವುದಕ್ಕೆ ಅವರು ೧೦೦ ರೂಪಾಯಿಗಳನ್ನು ಕೊಡಬೇಕು ಇದರಲ್ಲಿ ಏನಾಗುತ್ತದೆಂದರೆ ಆತನು ಇಂತಹ ಒಂದು ಸರ್ಟಿಫಿಕೆ ಟನ್ನು ತೆಗೆದುಕೊಂಡ ನಂತರ ಸಹಕಾರಿ ಸಂಘದಿಂದಲೋ ಅಥವಾ ಬ್ಯಾಂಕಿನಿಂದಲೋ ಅಥವಾ ಖಾಸಗಿಯವರಿಂದಲೋ ಇದರ ಒಂದು ಆಧಾರದ ಮೇಲೆ ಸಾಲವನ್ನು ಪಡೆದುಕೊಳ್ಳಬಹುದು. ಆ ರೀತಿ ಸಾಲವನ್ನು ಪಡೆದ ನಂತರ ಏನು ಗತಿಯಾಗುತ್ತದೆಂಬುದನ್ನು ಮಾನ್ಯ ದೇವೇಗೌಡರು ಈಗಾಗಲೇ ಹೇಳಿದ್ದಾರೆ. ಗೇಣಿದಾರರು ಪರಿಹಾರ ಹಣವನ್ನು ಕೊಡುವ ಅಗತ್ಯವಿಲ್ಲ ಎಂದು ಈ ಶಾಸನದಲ್ಲಿ ಎಲ್ಲೂ ಹೇಳಿಲ್ಲ. ಮುಂದೆ ಅವನು ಪರಿಹಾರವನ್ನು ಕೊಡಲೇಬೇಕು. ಇಲ್ಲದೇ ಇದ್ದರೆ ಮಾಫಿ ಮಾಡುತ್ತೇವೆಂದು ಎಲ್ಲೂ ಹೇಳಿಲ್ಲ. ಆತನು ೧೦೦ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡು ಪ್ರಮಾಣ ಪತ್ರವನ್ನು ತೋರಿಸಿ ಸಹಕಾರ ಸಂಘದಿಂದ ಅವನು ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ತೆಗೆದು

ಕೊಂಡಂತಹ ಸಾಲವನ್ನು ಅತನು ವಾಪಸ್ಸು ಕೊಡದಿದ್ದರೆ ಡಿಫಾಲ್ಟರ್ ಆಗುತ್ತಾನೆ. ಈ ಜಮೀನು ಸರ್ಕಾರದಿಂದ ಪಡೆದಿದ್ದನು. ಆದುದರಿಂದ ಅದನ್ನು ವಾಪಸ್ಸು ತೆಗೆದುಕೊಳ್ಳುವಾಗ ಅವನು ಇದರ ಮೇಲೆ ಮಾಡಿದಂತಹ ಸಾಲದ ಹೊರೆಯನ್ನು ಸರ್ಕಾರ ಹೊತ್ತುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಭೂಸುಧಾರಣೆಯ ಮೂಲ ಉದ್ದೇಶವನ್ನು ಈಡೇರಿಸುವುದಕ್ಕೆ ಆಗುವುದಿಲ್ಲ. ಇದನ್ನು ತಾವು ದಯ ಮಾಡಿ ಗಮನಿಸಬೇಕು. ೧೦೦ ರೂಪಾಯಿ ಕೊಟ್ಟರೆ ಪ್ರಮಾಣ ಪತ್ರ ಕೊಡುವುದು ಮಾತ್ರಕ್ಕೆ ಅರ್ಥ ಸೀಮಿತವಾಗಿದೆಯೇ ಹೊರತು ಇದಕ್ಕಿಂತ ಹೆಚ್ಚಿನ ವ್ಯಾಪ್ತಿ ಈ ಒಂದು ಮಸೂದೆಯಲ್ಲಿ ಇಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಮುಂದೆ ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ಆಸಕ್ತಿ ವಹಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳವರನ್ನು ಕೇಳಿಕೊಳ್ಳುತ್ತೇನೆ.

ಕೇಂದ್ರದಿಂದ ಹಣ ಪಡೆದುಕೊಳ್ಳಿ ಯಾವುದೇ ರೂಪದಲ್ಲಿ ಹಣವನ್ನು ಪಡೆದುಕೊಳ್ಳಿ, ಆದರೆ ತಾವು ಸೂಚನೆ ಕೊಡಿ ಯಾವ ರೀತಿಯಿಂದ ಈ ಹಣ ಕೊಡಿಸಬೇಕು ಎಂದು. ನಮ್ಮ ರಾಜ್ಯದ ರಿಸೋರ್ಸ್‌ನಿಂದ ಎಷ್ಟು ಸಾಧ್ಯವಾಗುತ್ತದೆ ಮತ್ತು ಕೇಂದ್ರದಿಂದ ಎಷ್ಟು ಬರುತ್ತದೆ, ಅಷ್ಟರಲ್ಲಿ ಭೂಮಿ ಕಳೆದುಕೊಳ್ಳುವ ಮಾಲಕರನ್ನು ಪುನರ್‌ವಸತಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ಈ ಭೂ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಸರ್ಕಾರ ತೀವ್ರವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಇನ್ನು ಎರಡನೆಯದು ಒಂದು ಪ್ರಶ್ನೆ ಏನು ಎಂದರೆ ಇವತ್ತಿನ ದಿವಸ ತಾವು ಏನು ಸರ್ಟಿಫಿಕೇಟ್ ಕೊಟ್ಟರೂ ಕೂಡ, ಸಿಕ್ಕುವ ಭೂಮಿಯನ್ನು ಆದರೆ ೧೫ ವರ್ಷಗಳ ಕಾಲ ಅವನು ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲ. ಅವನಿಗೆ ಪೂರ್ತಿ ಮಾಲೀಕತನದ ಹಕ್ಕು ಬರುವುದಿಲ್ಲ. ಅವನು ಈ ಜಮೀನನ್ನು ಆಲಿನಿಯೇಷನ್ ಮಾಡುವುದಕ್ಕೆ ಬರುವುದಿಲ್ಲ. ೧೫ ವರ್ಷಗಳ ಕಾಲ ಮಾಲೀಕನಾಗುವುದಕ್ಕೆ ಸಾಧ್ಯವಿಲ್ಲ. ಇದರಿಂದ ಅವನು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಇದರಿಂದ ಅವನಿಗೆ ಎಷ್ಟರಮಟ್ಟಿಗೆ ಅನುಕೂಲ ವಾಗುತ್ತದೆ ? ಇದರ ಬಗ್ಗೆ ಸರ್ಕಾರ ಸ್ವಲ್ಪ ಕೂಲಂಕುಷವಾಗಿ ಯೋಚನೆ ಮಾಡಬೇಕಾಗುತ್ತದೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಮಾನ್ಯ ದೇವೇಗೌಡರು ಹೇಳಿದ್ದರಲ್ಲಿ ಸತ್ಯಾಂಶ ಇದೆ. ಬಡ ರೈತನಿಗೆ ಇದರಿಂದ ಏನಾಗುತ್ತದೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಯಾವುದಾದರೂ ಸರ್ಕಾರ ಕಾನೂನು ತಂದರೆ ಸಹಾಯವಾಗಬೇಕು. ಯಾರು ಕೇವಲ ಗೇಣಿ ಜಮೀನಿನಲ್ಲಿ ಉಳುಮೆ ಮಾಡಿ ಗೇಣಿಯನ್ನು ಕೊಟ್ಟುಕೊಂಡು, ಒಂದು ಭೂ ಶಾಸನ ಮಿತಿ ಪ್ರಕಾರ ಕೆಲವು ಸಂದರ್ಭಗಳಲ್ಲಿ ಸ್ವಲ್ಪವೂ ಸ್ವಂತ ಜಮೀನು ಇಲ್ಲದೆ ಇರುವವರೂ ಇದ್ದಾರೆ. ಆದರೆ ಇನ್ನು ಕೆಲವರು ಗೇಣಿ ಮಾಡುತ್ತಿರು ವವರು ಅವರಿಗೆ ಸ್ವಂತ ಜಮೀನು ಇರುವವರು ಇದ್ದಾರೆ. ಒಂದು ಹಳ್ಳಿಯಲ್ಲಿ ತೋಟ ಮತ್ತು ಇತರೆ ಯಾವುದಾದರೂ ಸಂಪಾದನೆ ಇದ್ದರೆ ಅಂತಹವನಿಗೆ ಸಹಾಯ ಮಾಡುವುದು ಸಾಧ್ಯವಿಲ್ಲದೆ ಇದ್ದರೆ ಅದು ಒಂದು ಭಾಗ. ಆದರೆ ಇನ್ನು ಕೆಲವು ಸಂದರ್ಭಗಳಲ್ಲಿ ಒಬ್ಬ ಬಡವ ಉದ್ಯೋಗ ಮಾಡುತ್ತಾನೆ ಇಲ್ಲವೇ ಅವನ ಮಕ್ಕಳ ಜೊತೆಯಲ್ಲಿ ಇರುತ್ತಾನೆ. ಅವನಿಗೆ ಜಮೀನು ಇದ್ದರೂ ಕೂಡ ಅದನ್ನು ಗೇಣಿದಾರನಿಗೆ ಬಡವರಿಗೆ ಕೊಟ್ಟಿಲ್ಲದಿರಬಾರದು. ಅದನ್ನು ಯಾರಾದರೂ ಭೂಮಾಲೀಕರಿಗೆ ಕೊಟ್ಟು ತಾನು ಗೇಣಿಗೆ ಭದ್ರತೆ ಪಡೆದಿರುತ್ತಾರೆ. ಬಡವನ ಭೂಮಿಯನ್ನು ಸ್ವಂತ ಪಡೆಯುವ ಶ್ರೀಮಂತನಿಗೆ ಹೆಚ್ಚಿನ ಪ್ರೋತ್ಸಾಹ ಅನಗತ್ಯ. ನೂರು ರೂಪಾಯಿ ಕೊಟ್ಟರೆ ಖಾತೆ ಪಹಣಿಗೂ ಪಟ್ಟ ಕೊಡುವುದು ಯಾಕೆ ? ಯಾವ ವ್ಯಕ್ತಿಗೆ ಅಥವಾ ಯಾವ ಗೇಣಿದಾರನಿಗೆ ಭೂಮಿ ೫ ಎಕರೆಗಿಂತ ಕಡಿಮೆ ಸ್ವಂತದ್ದು ಇದ್ದರೆ ಅವನಿಗೆ ಗೇಣಿ ಮಾಡು ತ್ತಿದ್ದ ಭೂಮಿಯ ಹಕ್ಕನ್ನು ನೂರು ರೂಪಾಯಿಗೆ ಕೊಡುವುದು ಅವಶ್ಯಕತೆ ಇಲ್ಲ. ಅಂತಹ ಸಂದರ್ಭದಲ್ಲಿ ಯಾರು ಗೇಣಿ ಶಾಸನದ ಪ್ರಕಾರ ಭೂಮಿ ಕಳೆದುಕೊಂಡು ಅವನಿಗೆ ಜೀವನಕ್ಕೆ ತೊಂದರೆಯಾಗುತ್ತದೆ ಅಂತಹವರಿಗೆ ಏನಾದರೂ ಸಹಾಯ ಮಾಡುವುದು ಸಾಧ್ಯವೇ ? ಗೇಣಿದಾರನಾಗುವವನಲ್ಲಿ ಅವನಿಗೆ ಸ್ವಂತ ಜಮೀನು ಉಳಿದಿದ್ದರೆ ಅಥವಾ ಬೇರೆ ಉದ್ಯೋಗ ಇದ್ದರೆ ಅವನ ಬಗ್ಗೆ ಹೆಚ್ಚಿಗೆ ಕಾಳಜಿ ವಹಿಸಬೇಕಾದ್ದಿಲ್ಲ ಆದರೆ ಅವನಿಗೆ ಜೀವನಕ್ಕೆ ಮಾರ್ಗವೇ ಇಲ್ಲವೆಂದರೆ ಅವರಿಗೂ ಕೂಡ ಪುನರ್ವಸತಿ ಮಾಡಿ ಅನುಕೂಲ ಮಾಡಿಕೊಡುವುದು ಸೂಕ್ತ. ಇಂತಹವರಿಗೆ ಪೆನ್‌ಷನ್ ಕೊಡಿ ಇವರಿಗೂ ಕೂಡ ತಾತ್ಕಾಲಿಕವಾಗಿ ಯಾವು ದಾದರೂ ಪರಿಹಾರ ಕೊಡಿ. ಇವರಿಗೆ ಎಷ್ಟೇ ಸಹಾಯ ಮಾಡಿದರೂ ಸಾಲದು. ಅವರಿಗೆ ಕೊಡಬೇಕಾದ ಹಣವನ್ನು ಒಂದೇ ಕಂತಿನಲ್ಲಿ ಕೊಡಬೇಕು. ತಾವು ಯಾವ ಗೇಣಿದಾರನಿಂದ ಬಂದ ಹಣವನ್ನು ಬ್ಯಾಂಕಿ ನಲ್ಲಿ ಅದರ ಬಡ್ಡಿಯನ್ನು ಕೂಡ ಭೂ ಮಾಲೀಕನಿಗೆ ಕೊಡುವುದಿಲ್ಲ. ಈ ಕಾನೂನನ್ನು ಜಾರಿಗೆ ಕೊಟ್ಟ ರೀತಿ ನೋಡಿದರೆ ಇದು ಸರಿಯಲ್ಲ. ಆದ್ದರಿಂದ ಇದನ್ನು ಒಂದೇ ಕಂತಿನಲ್ಲಿ ಕೊಡಬೇಕಾಗುತ್ತದೆ. ಯಾವ ಗೇಣಿದಾರನಿಗೆ ಭೂಮಿ ಮಾಲೀಕತ್ವ ಕೊಡುತ್ತೀರಿ ಅದೇ ಸಮಯಕ್ಕೆ ಬಡ ಭೂ ಮಾಲೀಕನಿಗೆ

ಅವನಿಗೆ ಕೊಡಬೇಕಾದ ಕಂತನ್ನು ಸಹ ಕೊಡಬೇಕು. ಈ ಶಾಸನ ಬರೀ ಗೇಣಿದಾರನಿಗೆ ಅನ್ವಯಿಸುತ್ತದೆ. ಈ ಶಾಸನದ ೭೮ ಕಾಲಂ ಪ್ರಕಾರ ಸರ್‌ಪ್ಲಸ್ ಭೂಮಿ ಸೀಲಿಂಗ್‌ಗಿಂತ ಹೆಚ್ಚು ಇರುವ ಭೂಮಿಯನ್ನು ಸರ್ಕಾರ ತೆಗೆದುಕೊಂಡು ಭೂಮಿ ಇಲ್ಲದೆ ಇರುವವರಿಗೆ ಕೊಡಬೇಕು ಎನ್ನುವುದನ್ನು ತಾವು ಮಾಡುತ್ತೀರಿ. ಗೇಣಿದಾರರಿಗೆ, ನಿರ್ಗತಿಕರಾದವರಿಗೆ ಮತ್ತು ಡಿಸ್‌ಪ್ಲೇಸ್ಡ್ ಟೆನೆಂಟ್ಸ್ ಹಾಗೂ ಕೃಷಿ ಕಾರ್ಮಿಕರಿಗೆ ಅಂಥ ಭೂಮಿಯನ್ನು ಹಂಚಬೇಕೆಂದು ಕಾನೂನಿನಲ್ಲಿ ಇದೆ, ಲ್ಯಾಂಡ್ ರೀ ಫಾರ್ಮ್ಸ್ ಆಕ್ಟ್‌ನಲ್ಲಿ Agricultural labourers, and other persons residing in the village in the same unit whose gross annual income does notexceed Rs.200/- per year ಅಂತ ಇದೆ. ಇದರಲ್ಲಿ ೫೦ ಭಾಗ ಎಸ್. ಸಿ. ಮತ್ತು ಎಸ್. ಟಿ ಗಳಿಗೆ ಕೊಡುತ್ತೀರಿ. ಅವರು ಎಷ್ಟು ಬೆಲೆ ಕೊಡಬೇಕು ? ಗೇಣಿದಾರ ನೂರು ರೂಪಾಯಿ ಕೊಟ್ಟರೆ ಪಟ್ಟ ಸಿಕ್ಕುತ್ತದಾದರೆ ಇವರಿಗಿಂತ ಕೆಳಮಟ್ಟದಲ್ಲಿ ಇರುವ ಕೃಷಿ ಕಾರ್ಮಿಕ ಮೊದಲಾದವರಿಗೆ ಸಿಕ್ಕುತ್ತದೆಯೇ ? ಇಂತಹವರು ಎಷ್ಟು ಪರಿಹಾರ ಕೊಡಬೇಕಾಗುವುದು ಎಂದರೆ ಭೂಮಿಗೆ ಶೇಕಡ ಮೌಲ್ಯವನ್ನು ೨೦ ವಾರ್ಷಿಕ ಕಂತುಗಳಲ್ಲಿ ಕೊಡಬೇಕು. ಭೂ ಕಂದಾಯದ ೧೫೦ ಪಟ್ಟು ಹಣವನ್ನು ಈ ಬಡ ಜನ ಸರ್ಕಾರಕ್ಕೆ ಒಂದೇ ಕಂತಿನಲ್ಲಿ ಅಥವಾ ೨೦ ವಾರ್ಷಿಕ ಕಂತಿನಲ್ಲಿ ಕೊಡಬೇಕೆಂದು ಷರತ್ತು ಇದೆ. ಆದರೆ ಏನೂ ಇಂಥ ಜನರೇ ಉಚಿತವಾಗಿ ಭೂಮಿ ಸಿಕ್ಕುವಂತ ತಿದ್ದುಪಡಿಯನ್ನು ತಾವು ತರಬೇಕು,

೫.೦೦ ಪಿ. ಎಮ್.

ಇದರ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು ಎಂದು ಕೇಳಿಕೊಂಡು ನಾನು ಈಗಾಗಲೇ ಹೇಳಿದಂತಹ ತಿದ್ದುಪಡಿಗಳನ್ನು ಭೂಸುಧಾರಣಾ ಮಸೂದೆಗೆ ತಂದು ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಬೇಕು. ಸಮಾಜದಲ್ಲಿ ಗೊಂದಲವನ್ನು ಉಂಟುಮಾಡತಕ್ಕ ಅಂಶಗಳನ್ನು ಬಿಟ್ಟು ಇದನ್ನು ಕೂಲಂಕಷವಾಗಿ ಅಭ್ಯಾಸ ಮಾಡಿ ಎಲ್ಲಾ ಅಂಶಗಳನ್ನು ಒಳಗೊಂಡತಹ ಒಂದು ಸಮಗ್ರವಾದ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ತಂದು ಶೀಘ್ರವಾಗಿ ಆದರ ಉದ್ದೇಶ ಈಡೇರುವ ಹಾಗೆ ಮಾಡಬೇಕು. ನೂರಾರು ಎಕರೆ ಜಮೀನು ಕೆಲವೇ ಜನರ ಕೈಯ್ಯಲ್ಲಿದ್ದು ಉಳುವವನಿಗೆ ಭೂಮಿ ಸಿಕ್ಕದೇ ಇರುವ ಸಂದರ್ಭದಲ್ಲಿ ಈ ಭೂಸುಧಾರಣಾ ಕಾನೂನನ್ನು ಎಫೆಕ್ಟೀವ್ ಆಗಿ ಜಾರಿಗೆ ತಂದು ಉಳುವವನಿಗೆ ಭೂಮಿಯನ್ನು ಕೊಟ್ಟು ಅವನು ಯಾವ ಭಯವೂ ಇಲ್ಲದೆ ಭೂಮಿಯನ್ನು ಉತ್ತು ಬೆಳೆಯುವುದಕ್ಕೆ ಅನುಕೂಲವಾಗುವ ಹಾಗೆ ಭೂಮಾಲೀಕತ್ವವನ್ನು ಬಡಜನಗಳಿಗೆ ಕೊಡುವ ರೀತಿಯಲ್ಲಿ ಆಗಬೇಕು. ಆ ರೀತಿ ತಿದ್ದುಪಡಿಯನ್ನು ತರುತ್ತಾರೆಂದು ನಂಬಿ ಈ ಮಸೂದೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ)—. ಸನ್ಮಾನ್ಯ ಅಧ್ಯಕ್ಷರೇ ಈಗ ಈ ಸಭೆಯಮುಂದೆ ತಂದಿರತಕ್ಕಂಥಾ ಮಸೂದೆ ಒಂದು ದೃಷ್ಟಿಯಿಂದ ಸ್ವಾಗತಿಸತಕ್ಕ ಮಸೂದೆಯಾಗಿದ್ದರೂ ಕೂಡ ಇನ್ನೊಂದು ದೃಷ್ಟಿಯಿಂದ ಈ ಮಸೂದೆಯನ್ನು ವಿರೋಧಿಸುತ್ತೇನೆ. ಇದು ನಮ್ಮ ಸರ್ಕಾರ ಇದ್ದಾಗ ಇದರ ಬಗ್ಗೆ ಸುಗ್ರೀವಾಜ್ಞೆ ಆದದ್ದು. ಆದ್ದರಿಂದ ಹೇಗೆ ನಾವು ವಿರೋಧ ಮಾಡುವುದಕ್ಕೆ ಸಾಧ್ಯ ಎನ್ನುವ ಪ್ರಶ್ನೆ ಬರಬಹುದು. ನಾನು ಈ ಸಂದರ್ಭದಲ್ಲಿ ಒಂದು ಪ್ರಾಮುಖ್ಯವಾದ ವಿಷಯದ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಈ ದೇಶದ ಆರ್ಥಿಕ ಅಭಿವೃದ್ಧಿ ನಡೆದಂತಹ ಹಾದಿಯಲ್ಲಿ ಭೂಸುಧಾರಣಾ ಕಾರ್ಯಕ್ರಮಕ್ಕೆ ಬಹಳ ಕಾಲದಿಂದ ಬಹಳ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಅದನ್ನು ಘೋಷಣೆಯಲ್ಲಿ ಮತ್ತು ಭಾಷಣದಲ್ಲಿ ಹೆಚ್ಚಿಗೆ ಕೊಟ್ಟಿದ್ದಾರೆ. ಆದರೆ ಕಾರ್ಯತಃ ಕೆಲವು ಕಡೆಗಳಲ್ಲಿ ಮಾಡುವುದಕ್ಕೆ ಪ್ರಯತ್ನ ನಡೆದಿದೆ. ಆದರೆ ಇಡೀ ಭಾರತ ದೇಶವನ್ನು ತೆಗೆದುಕೊಂಡರೆ ಭೂಸುಧಾರಣೆ ಎನ್ನುವ ಶಬ್ದಕ್ಕೆ ಎಲ್ಲಾ ರಾಜ್ಯಗಳಲ್ಲಿಯೂ ಒಂದೇ ಅರ್ಥ ಇಲ್ಲ. ಒಂದೊಂದು ರಾಜ್ಯದಲ್ಲಿ ಒಂದೊಂದು ಅರ್ಥ ಇದೆ. ಕೆಲವು ರಾಜ್ಯಗಳಲ್ಲಿ ಈಗಾಗಲೇ ಭೂಸುಧಾರಣೆ ಮಾಡಿ ಮುಗಿದು ಹೋಯಿತು ಎಂದು ಹೇಳುವವರಿದ್ದಾರೆ. ಈ ಮಾತನ್ನು ಸರ್ವ ಸಾಧಾರಣವಾದ ಜನ ಹೇಳುತ್ತಿಲ್ಲ. ಮುಖ್ಯ ಮಂತ್ರಿಗಳು ಮತ್ತು ಮಂತ್ರಿಗಳಾಗಿದ್ದವರು ಈ ಮಾತನ್ನು ಹೇಳುತ್ತಾರೆ, ಅವರು ಭೂಸುಧಾರಣೆ ಮಾಡಿರುವುದು ಏನಪ್ಪಾ ಎಂದರೆ ಆಂಧ್ರದಲ್ಲಿ ಭೂಮಿ ಉಳುವವರನ್ನು ಒಕ್ಕಲೆಬ್ಬಿಸದಂತೆ ಮಾಡಿದ್ದಾರೆ. ಅದೇ ಭೂಸುಧಾರಣೆ. ಇದನ್ನು ಮಾಡಿ ೨೦ ಅಂಶಗಳ ಕಾರ್ಯಕ್ರಮದಲ್ಲಿ ಒಂದು

ಕಾರ್ಯಕ್ರಮವನ್ನು ಮಾಡಿ ಮುಗಿಸಿದ್ದೇವೆ ಎಂದು ಘೋಷಣೆ ಮಾಡಿರತಕ್ಕವರೂ ಇದ್ದಾರೆ. ಭಾರತದಲ್ಲಿ ದಕ್ಷಿಣ ರಾಜ್ಯಗಳಲ್ಲಿ ಕೇರಳದಲ್ಲಿ ಮತ್ತು ಆಂಧ್ರದಲ್ಲಿ ಭೂಸುಧಾರಣೆಯ ಬರೀ ಶಾಸನವನ್ನು ಮಾಡಿದ್ದಾರೆ. ಕರ್ನಾಟಕದಲ್ಲಿ ನಿಜವಾಗಿ ಕ್ರಾಂತಿಕಾರಕವಾಗಿ ಭೂಸುಧಾರಣೆಯನ್ನು ಮಾಡಿರುವಾಗ ಇದನ್ನು ಕ್ರಾಂತಿಕಾರಕ ಭೂಸುಧಾರಣೆ ಎಂದು ಹೇಳಬೇಕಾಗುತ್ತದೆ. ಹೀಗೆ ನಿಜವಾದ ಅರ್ಥಕ್ಕೆ ಹೋದರೆ ಕ್ರಾಂತಿಕಾರಕ ಹೌದೋ ಅಲ್ಲವೋ ಎನ್ನುವ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಈಗ ನಮ್ಮ ದೇಶದಲ್ಲಿ ಇರುವ ಭೂಸುಧಾರಣಾ ಕಾನೂನಿನ ಚೌಕಟ್ಟಿನಲ್ಲಿ ಮಾತನಾಡುವುದಾದರೆ ಇಲ್ಲಿ ನಮ್ಮಲ್ಲಿ ಕ್ರಾಂತಿಕಾರಕವಾದ ಕಾಯಿದೆಯನ್ನು ತಂದಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಭೂಸುಧಾರಣೆಯಿಂದ ದೇಶದಲ್ಲಿ ಜನಗಳಿಗೆ ಅನುಕೂಲತೆ ಆಗಬೇಕಾದರೆ ಬಹಳ ಪ್ರಾಮುಖ್ಯವಾಗಿ ಯಾರು ಅಧಿಕಾರದಲ್ಲಿ ಇರುತ್ತಾರೆಯೋ ಅವರು ಎಷ್ಟು ದಿವಸ ಅಧಿಕಾರದಲ್ಲಿ ಇರುತ್ತಾರೆ ಎನ್ನುವುದು ಯಃಕಶ್ಚಿತ್ ವಿಚಾರ. ಶಾಶ್ವತವಾಗಿ ಯಾರೂ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ ಇರಬೇಕಾದ ಅಗತ್ಯವೂ ಇಲ್ಲ. ಕಾರ್ಯಕ್ರಮವನ್ನು ಮಾಡುವುದು ಎಲೆಕ್ಷನ್ ದೃಷ್ಟಿಯಿಂದ, ವೋಟಿನ ದೃಷ್ಟಿಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಮಾಡಿದರೂ ಪ್ರಯೋಜನವಿಲ್ಲ. ಆದ್ದರಿಂದ ಆ ಒಂದು ಭ್ರಮೆಯನ್ನು ಬಿಟ್ಟು ಕರ್ತವ್ಯವನ್ನು ಮಾಡತಕ್ಕದ್ದನ್ನು ಮಾಡಿಕೊಳ್ಳಬೇಕಾಗುತ್ತದೆ. ಆ ಒಂದು ಭ್ರಮೆಯನ್ನು ಇಟ್ಟುಕೊಂಡು ಏತಕ್ಕೆ ಕೆಲಸವನ್ನು ಮಾಡಬೇಕು ? ಎಷ್ಟೋ ಊರಿನ ಜನ ಮೊನ್ನೆ ನಾವು ದೀಪವನ್ನು ಹಾಕಿದ್ದೇವೆ ಎಂದು ಹೇಳಿದಾಗ ನೀವು ದೀಪವನ್ನು ಹಾಕಿದ್ದರೆ ಅದನ್ನು ಕಿತ್ತುಕೊಂಡು ಹೋಗಿ ನಾವು ಶ್ರೀಮತಿ ಇಂದಿರಾಗಾಂಧಿಯವರಿಗೆ ವೋಟು ಹಾಕುತ್ತೇವೆ ಎಂದು ಹೇಳಿದರು. ಆದ್ದರಿಂದ ಪ್ರಜಾಭುತ್ವದಲ್ಲಿ ಯಾರು ಅಧಿಕಾರದಲ್ಲಿ ಇರುತ್ತಾರೆಯೋ ಅವರು ತಮ್ಮ ಇಚ್ಛೆಯ ಪ್ರಕಾರ ಮಾಡಬೇಕಾದ ಕರ್ತವ್ಯವನ್ನು. ಕಾರ್ಯವನ್ನು ತಾವು ಇಟ್ಟುಕೊಂಡಿರುವ ಉದ್ದೇಶಕ್ಕನುಗುಣವಾಗಿ ನಿಷ್ಠೆಯಿಂದ ಕೆಲಸಗಳನ್ನು ಮಾಡಬೇಕು ಇವೊತ್ತು ಭೂಸುಧಾರಣೆಯ ಮೂಲ ತತ್ವ ಏನು ? ಉಳುವವನೇ ಹೊಲದ ಒಡೆಯ ಎಂದು ಮಾಡತಕ್ಕದ್ದು, ಅವರು ನಿಜವಾದ ಒಡೆಯ ಎಂದು ಮಾನ್ಯ ಮಾಡುವುದಕ್ಕೆ ನಾವು ಈ ತತ್ವವನ್ನು ಒಪ್ಪಿಕೊಂಡಿದ್ದೇವೆ, ಅದನ್ನು ಮಾನ್ಯ ಮಾಡಿದ ಮೇಲೆ ಇಷ್ಟು ವರ್ಷಕಾಲ ಭೂಮಿಯನ್ನು ಉಳುಮೆ ಮಾಡಿಕೊಂಡು ಬಂದಿರತಕ್ಕ ಒಡೆಯನನ್ನು ಅವನು ಇವೊತ್ತು ಇಷ್ಟು ದುಡ್ಡು ಕೊಟ್ಟರೆ ಅವನಿಗೆ ಪಟ್ಟಾ ಕೊಡುತ್ತೇವೆ. ಎಂದು ಹೇಳತಕ್ಕದ್ದು ಮೂಲಭೂತವಾಗಿ ತಪ್ಪು ಎಂದು ನಾನು ಹೇಳುತ್ತೇನೆ ಉಳುವವನೇ ಭೂಮಿಯ ಒಡೆಯ ಎಂದು ಭೂಸುಧಾರಣೆಯನ್ನು ತಂದಮೇಲೆ ಉಳುವವನಿಗೆ ಭೂಮಿಯನ್ನು ಖಾಯಂ ಎಂದು ಗೊತ್ತು ಮಾಡಿ ಅವನು ಆ ಭೂಮಿಯ ಮಾಲೀಕ ಎಂದು ಹೇಳುವುದಕ್ಕೆ ಶಾಸನಬೇಕೇ ಹೊರತು 100 ರೂಪಾಯಿಗಳನ್ನು ಕೊಡಿ ಎಂದು ಅವನನ್ನು ಕೇಳತಕ್ಕದ್ದು ಧರ್ಮವಲ್ಲ. ನೀತಿಯೂ ಅಲ್ಲ ಎಂದು ನನ್ನ ಅಭಿಪ್ರಾಯ. ಹಿಂದೆ ನಮ್ಮ ಸರ್ಕಾರ ಇದ್ದಾಗಲೂ ಕೂಡ ನಾನು ಇದೇ ಅಭಿಪ್ರಾಯವನ್ನು ಹೇಳಿದ್ದೇನೆ. ಆದ್ದರಿಂದ ಇವೊತ್ತು ನಾನು ಆ ಅಭಿಪ್ರಾಯವನ್ನು ಹೇಳುವುದಕ್ಕೆ ನನಗೆ ಯಾವ ಆತಂಕವೂ ಇಲ್ಲ. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಭೂಸುಧಾರಣೆ ಎನ್ನುವುದು ಒಂದು ಕೊನೆ ಮುಟ್ಟಬೇಕು ಎನ್ನುವ ಅಭಿಪ್ರಾಯ ಇದೆ ಆಂಧ್ರದಲ್ಲಿ ಜಮೀನಿನ ಒಡೆಯನನ್ನು ಮಾಡುವುದಕ್ಕೂ ಬೇರೆಯವರಿಗೆ ಪರಿಹಾರವನ್ನು ಕೊಡಬೇಕಾದ ವಿಚಾರಕ್ಕೂ ನಾವು ಸಂಬಂಧವನ್ನು ಕಲ್ಪನೆ ಮಾಡಕೂಡದು ಶಾಸನದಲ್ಲಿ ಎಲ್ಲೆಲ್ಲಿ ಸಂಬಂಧ ಕಲ್ಪನೆ ಮಾಡಿರತಕ್ಕ ಕೊಂಡಿಗಳು ಇವೆ. ಆ ಕೊಂಡಿಗಳನ್ನು ನಿರ್ಮೂಲನೆ ಮಾಡಬೇಕಾದ್ದು ಅಗತ್ಯ. ಈಗಾಗಲೇ ಈ ಮಸೂದೆಯಲ್ಲಿರತಕ್ಕ ವಿರೋಧಾಭಾಸವನ್ನು ಮಾನ್ಯ ಸದಸ್ಯರಾದ ಶ್ರೀ ಕಕ್ಕಿಲಾಯ ಅವರು ಎತ್ತಿ ತೋರಿಸಿದ್ದಾರೆ. ಟೆನೆಂಟ್ಸ್ 100 ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟು ಪಟ್ಟಾವನ್ನು ತೆಗೆದುಕೊಳ್ಳಬೇಕು ಎಂದು ಈ ಮಸೂದೆಯಲ್ಲಿ ಹೇಳಿದ್ದಾರೆ. ಇದು ವಿರೋಧಾಭಾಸವಾಗಿದೆ. ನಾನು ಒಂದು ಸಂತೋಷದ ವಿಚಾರ ಹೇಳುವುದೇನೆಂದರೆ ಮಾನ್ಯ ಕಂದಾಯ ಸಚಿವರು ಗೇಣಿದಾರರ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಅವರು ಗೇಣಿದಾರರ ಸಮಸ್ಯೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ ಅವರು ಆ ಸಮಸ್ಯೆಯನ್ನು ಆತ್ಮೀಯವಾಗಿ ಬಲ್ಲರು. ಕರ್ನಾಟಕದಲ್ಲಿ ಏನು ಐತಿಹಾಸಿಕವಾಗಿ ಕ್ರಾಂತಿಕಾರಕವಾದ ಭೂಸುಧಾರಣಾ ಮಸೂದೆ ಬಂದಿದೆ ಹಾಗೆಯೇ ಅವರು ಐತಿಹಾಸಿಕವಾಗಿ ಈ ರೆವಿನ್ಯೂ ಖಾತೆಗೆ ಮಂತ್ರಿಗಳಾಗಿ ಬಂದಿದ್ದಾರೆ. ಈಗ ಅವರು ಗೇಣಿದಾರರಿಗೆ ಐತಿಹಾಸಿಕ ಕಾರ್ಯವನ್ನು ನಿರ್ವಹಿಸುವುದಕ್ಕೆ ಮನಸ್ಸು ಮಾಡಬೇಕು. 'ಇಲ್ಲಿ ಹಣಕಾಸಿನ ಪ್ರಶ್ನೆ ಬರುವುದಿಲ್ಲ. ಗೇಣಿದಾರರು ಎಂದು ಯಾರು ಯಾರು ತೀರ್ಮಾನ ಆಗುತ್ತಾರೆಯೋ ಅವರನ್ನು ಆ ದಿನದಿಂದ ಮಾಲೀಕರು ಎನ್ನುವ ಕಾನೂನು ಮಾಡಬೇಕು.

ಅವರು ಉಳತಕ್ಕ ಜಮೀನು ೧೦ ಎಕರೆ ಇರಲಿ, ೧೫ ಎಕರೆ ಇರಲಿ, ಅಥವಾ ೨-೩ ಎಕರೆ ಇರಲಿ, ಅದಕ್ಕೆ ಅವರು ಮಾಲೀಕರು ಎಂದು ಮಾಡಬೇಕು. ಜನಗಳಮೇಲೆಯಾದರೂ ತೆರಿಗೆಯನ್ನು ಹಾಕಿ ಅಥವಾ ಯಾರ ಮೇಲೆ ಬೇಕಾದರು ತೆರಿಗೆಯನ್ನು ಹಾಕಿ ಸರ್ಕಾರಕ್ಕೆ ಹಣವನ್ನು ಸಂಪಾದನೆ ಮಾಡುವುದಕ್ಕೆ ಸರ್ಕಾರಕ್ಕೆ ಎಲ್ಲಾ ಪರಮಾಧಿಕಾರ ಇರುವುದರಿಂದ ಲೆಕ್ಕ ಬರೆದು ಕೊಂಡು ರುಜು ಹಾಕಿಸಿಕೊಂಡು ದಿನಸಿ ಅಂಗಡಿಯ ಹಾಗೆ ವ್ಯವಹಾರ ಮಾಡತಕ್ಕದ್ದು ಸರ್ಕಾರಕ್ಕೆ ಭೂಷಣವಲ್ಲ ಕಂತುಗಳು ಎಂದು ಮಾಡಿ ೨೦ ವರ್ಷ ಲೆಕ್ಕ ಬರೆದುಕೊಂಡು ಹೋಗುತ್ತಾರೆ ಇದು ನಿಜವಾಗಿಯೂ ಅರ್ಥ ಹೀನ ವಿಚಾರ. ಯಾರು ಗೇಣಿದಾರರು ಎಂದು ಇದ್ದಾರೆ, ಯಾರು ಉಳುವವರು ಇದ್ದಾರೆ ಅವರು ಹೊಲದೊಡೆಯರಾಗುತ್ತಾರೆ. ಇಡೀ ದೇಶದಲ್ಲಿ ಕೆಲವರಿಗೆ ಸಾಕಷ್ಟು ಭೂಮಿ ಇದೆ. ಸಾಕಷ್ಟು ಸಂಪತ್ತು ಇದೆ. ಅವರಿಗೆ ತೆರಿಗೆಯನ್ನು ಹಾಕಿ ಹಣವನ್ನು ಪಡೆದುಕೊಳ್ಳಬಹುದು. ಆದ್ದರಿಂದ ಗೇಣಿದಾರರು ಯಾರು ಯಾರು ಇದ್ದಾರೆಯೋ ಅವರನ್ನು ಭೂಮಾಲೀಕರನ್ನಾಗಿ ಮಾಡಿ ಅವರು ಬದುಕುವುದಕ್ಕೆ ಬೇಕಾದಂತಹ ಎಲ್ಲಾ ಸೌಕರ್ಯವನ್ನೂ ಒದಗಿಸಿಕೊಡಬೇಕು. ಸರ್ಕಾರಕ್ಕೆ ಬೇಕಾದ ಹಣವನ್ನು ಪಡೆದುಕೊಳ್ಳುವುದಕ್ಕೆ ಶಕ್ತಿ ಸಾಮರ್ಥ್ಯ ಇದೆ. ಆದ್ದರಿಂದ ಗೇಣಿದಾರರನ್ನು ಭೂಮಾಲೀಕರನ್ನಾಗಿ ಮಾಡುವ ವ್ಯವಹಾರದಲ್ಲಿ ದಿನಸಿ ಅಂಗಡಿ ವ್ಯವಹಾರದ ರೀತಿಯಲ್ಲಿ ಮಾಡಬೇಕಾದ ಆಗತ್ಯವಿಲ್ಲ. ದಯವಿಟ್ಟು ಬಹಳ ಗಂಭೀರವಾದ ಪ್ರಯತ್ನ ಮಾಡಬೇಕು. ಈಗ ಯಾವ ಗೊಂದಲ ಪರಿಸ್ಥಿತಿಯೂ ಇಲ್ಲ. ಕೊನೆಯ ಪಕ್ಷ ಈ ಮಸೂದೆಯನ್ನು ಈಗ ಶುದ್ಧ ಮಾಡಬೇಕು. ನಾನು ಈಗಾಗಲೇ ಹೇಳಿದ ಹಾಗೆ ಭೂಸುಧಾರಣ ಕಾನೂನನ್ನೂ ಜಾರಿಗೆ ತರುವುದಕ್ಕೆ ಕೇಂದ್ರ ಸರ್ಕಾರದಿಂದ ಬರತಕ್ಕ ನೆರವನ್ನು ಪಡೆಯುವುದಕ್ಕೆ ಬೇಕಾದಂತಹ ಶಕ್ತಿ ಸಾಮರ್ಥ್ಯ ಈ ಸರ್ಕಾರಕ್ಕೆ ಇದೆ. ಹಿಂದೆ ಇದ್ದಂತಹ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ನೆರವು ಪಡೆಯುವುದಕ್ಕೆ ಒಪ್ಪದೆ ಇರತಕ್ಕವರು ಇದ್ದರು. ಇವೊತ್ತು ಆ ತೊಡಕುಗಳು ತಮಗೆ ಇಲ್ಲದೆ ಇರುವುದರಿಂದ ಭೂಸುಧಾರಣಾ ಕಾಯಿದೆಯನ್ನು ಸಂಪೂರ್ಣವಾಗಿ ಜಾರಿಗೆ ತರತಕ್ಕಂಥಾ ಒಂದು ಅವಕಾಶ ಇದೆ.

ಇದನ್ನು ತಾವು ಏನೂ ಇಲ್ಲದೆ ಪರಿಹಾರಕ್ಕಾಗಿಯೋ ಅವರಿಂದ ದುಡ್ಡು ವಸೂಲು ಮಾಡುವುದಕ್ಕೆ ಎಂದು ಗಂಟು ಹಾಕುವುದಕ್ಕೆ ಹೋಗಬಾರದು ಎನ್ನುವುದು ನನ್ನ ಅಭಿಪ್ರಾಯ. ರಾಜ್ಯದ ಆರ್ಥಿಕ ಸ್ಥಿತಿಯ ಕಲ್ಪನೆ ಇಲ್ಲದೆ ನಾನು ಮಾತನಾಡುತ್ತಿದ್ದೇನೆ ದಲ್ಲ. ತಾವು ಯೋಜನಾ ಇಲಾಖೆಯೊಂದಿಗೆ ಯೋಚನೆ ಮಾಡುವುದಾದರೆ, ಪರಿಹಾರ ಕೊಡುವುದಕ್ಕೆ ಬೇಕಾಗತಕ್ಕ ಯೋಜನಾ ವೆಚ್ಚಕ್ಕೆ ಅವಕಾಶವಿದೆ ಯೆನ್ನುವುದನ್ನು ಮನಗಾಣಬಹುದು. ಪರಿಹಾರ ಕೊಡುವುದಕ್ಕೆ ದುಡ್ಡು ಬೇಕು. ಅದನ್ನು ಬೇರೆ ರೀತಿ ಯಲ್ಲಿ ಕೊಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಆರ್ಥಿಕ ಸಾಮರ್ಥ್ಯ ಇದೆ. ಆದ್ದರಿಂದ ತಾವು ಯಾರು ಗೇಣಿ ದಾರರು ಇದ್ದಾರೆ ಅವರೆಲ್ಲರನ್ನೂ ಭೂ ಮಾಲೀಕರೆಂದು ಘೋಷಣೆ ಮಾಡಿದರೆ, ಗೇಣಿದಾರರ ಕಾನೂನು ಪ್ರಕಾರ ಸಾಕಷ್ಟು ಭೂಮಿ ಸರ್ಕಾರಕ್ಕೆ ಸಿಕ್ಕುತ್ತದೆ. ಈ ಭೂಮಿಯನ್ನು ಪುಗಸಟ್ಟೆಯಾಗಿ ನೀವು ಯಾರಿಗೂ ಕೊಡಬೇಕಾಗಿಲ್ಲ. ಅಂದಮಾತ್ರಕ್ಕೆ ನಾನು ಅವರ ಪರವಾಗಿ ಮಾತನಾಡುತ್ತಿದ್ದೇನೆಂದಲ್ಲ. ಸರ್ಕಾರ ವ್ಯವ ಹಾರ ಮಾಡುವುದಕ್ಕೂ ಇವರಿಗೆ ಪರಿಹಾರ ಕೊಡುವುದಕ್ಕೂ ಸಂಬಂಧವಿಲ್ಲ ಯಾರು ಯಾರು ಸರ್ಕಾರದಿಂದ ಭೂಮಿಯನ್ನು ಪಡೆದುಕೊಂಡು ಭೂ ಮಾಲೀಕರಾಗುತ್ತಾರೋ ಅವರಿಗೆ ಬೇರೆ ಯಾವುದಾದರೂ ಒಂದು ಕರವನ್ನು ಹಾಕಿ ಮುಂದಿನ ವರ್ಷದಿಂದ ಅದನ್ನು ಪಡೆಯಬಹುದು. ಈ ದೃಷ್ಟಿಯಿಂದ ತಾವು ಈ ಮಸೂದೆಯನ್ನು ತಾತ್ಕಾಲಿಕವಾಗಿ ಬೇಕಾದರೆ ಪರಿಗಣಿಸಿ ಯಾರು ಗೇಣಿದಾರರು ಇದ್ದಾರೋ ಅವರನ್ನು ತಕ್ಷಣ ಭೂ ಮಾಲೀಕರೆಂದು ಮಾಡಿ ಗೇಣಿದಾರರ ಸಮಸ್ಯೆಯನ್ನು ಬಗೆಹರಿಸಬಹುದು. ನಂತರ ಭೂ ಮಾಲೀಕರು ಯಾರು ಯಾರು ಇದ್ದಾರೆ ಯಾವ ಯಾವ ವರ್ಗ ಅವರಲ್ಲಿದೆ. ಅವರಲ್ಲಿ ಎಷ್ಟೆಷ್ಟು ಭೂಮಿ ಇದೆ ಅದನ್ನು ನೋಡಿ ಆಯಾ ಸ್ಥಳಗಳಿಗನುಗುಣವಾಗಿ ಕರ ಪಡೆದುಕೊಳ್ಳುವುದಕ್ಕೆ ತಾವು ಅಪೇಕ್ಷೆ ಪಡುತ್ತೀರೋ ಅದರಂತೆ ಪಡೆದು ತಮ್ಮ ಕೆಲಸ ಕಾರ್ಯಗಳಿಗೆ ಎಷ್ಟು ಹಣ ಬೇಕೋ ಅಷ್ಟನ್ನು ಪಡೆದುಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ಕೊಡುವುದಕ್ಕೆ ಸಾಧ್ಯವಿದೆ. ಈ ರೀತಿಯಾಗಿ ಮಾಡಿದರೆ ಭೂ ಸುಧಾರಣ ಕಾನೂನು ಸಾರ್ಥಕವಾದ ರೀತಿಯಲ್ಲಿ ಜಾರಿಗೆ ಕೊಡಬಹುದು. ಅದುಬಿಟ್ಟು ಕೊಂಡಿ ಕೊಂಡಿಯಾಗಿ ಇದನ್ನು ಮಾಡಿ ಕೊನೆಗೆ ಒಂದು ಸರಪಳಿ ಮಾಡಿದರೆ ಅದರಿಂದ ಖಂಡಿತವಾಗಿಯೂ ಯಾವ ಪ್ರಯೋಜನವೂ ಆಗುವುದಿಲ್ಲ ಎನ್ನುವುದನ್ನು ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಈ ಮಸೂದೆಯನ್ನು ನಾವು ಬೆಂಬಲಿಸೋಣ, ಆದರೆ ಇದನ್ನು ಫೈನಲ್ ಎನ್ನತಕ್ಕ ದೃಷ್ಟಿಯಲ್ಲಿ ಮಾಡು ವುದಕ್ಕೆ ಹೋಗಬೇಡಿ. ಆದಷ್ಟು ಶೀಘ್ರವಾಗಿ ಗೇಣಿದಾರರನ್ನು ಭೂ ಮಾಲೀಕರನ್ನಾಗಿ ಮಾಡಬೇಕು

ಎನ್ನುವುದಕ್ಕೆ ಒಂದು ಶಾಸನವನ್ನು ತಂದು ಭೂಸುಧಾರಣಾ ಕಾನೂನನ್ನು ನ್ಯಾಯವಾದ ರೀತಿಯಲ್ಲಿ ಪರಿಪೂರ್ಣವಾದ ರೀತಿಯಲ್ಲಿ ಕಾರ್ಯಗತ ಮಾಡಬೇಕಾದಂಥ ಒಂದು ಐತಿಹಾಸಿಕ ಕೀರ್ತಿಯನ್ನು ಪಡೆದು ಕೊಳ್ಳುವುದಕ್ಕೆ ಸಿಕ್ಕಿರುವ ಅವಕಾಶವನ್ನು ತಾವು ತಪ್ಪಿಸಿಕೊಳ್ಳಬಾರದು ಎಂದು ನಾನು ಸೂಚನೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ತಂದಿರತಕ್ಕ ಕರ್ನಾಟಕ ಭೂ ಸುಧಾರಣಾ ಕಾನೂನಿನ ತಿದ್ದುಪಡಿ ಏನು ಇದೆ ಅದರಲ್ಲಿ ಒಂದೇ ಒಂದು ಮುಖ್ಯ ಅಂಶ ವನ್ನು ನಾನು ನನ್ನ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದೇನೆ. ಗೇಣಿದಾರರು ಭೂ ಮಾಲೀಕರು ಎಂದು ಭೂನ್ಯಾಯ ಮಂಡಳಿಗಳು ತೀರ್ಪನ್ನು ಅನೇಕ ಕೇಸ್‌ಗಳಲ್ಲಿ ಕೊಟ್ಟಿವೆ ಇದರ ಪ್ರಕಾರ ಯಾರು ಯಾರು ಎರಡು ಯೂನಿಟ್ ಭೂಮಿಯನ್ನು ಹೊಂದಿದ್ದಾರೋ ಅಂಥವರು ೧೦೦ ರೂಪಾಯಿಗಳನ್ನು ಕಟ್ಟಿದರೆ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡಬೇಕು ಎಂದು ನಾವು ಮಾಡಿದ್ದೇವೆ. ಇದರ ಮೇಲೆ ಅವನು ತನ್ನ ಭೂಮಿಯನ್ನು ಅಭಿವೃದ್ಧಿ ಪಡಿಸತಕ್ಕ ವಿಷಯದಲ್ಲಿ ಇಂಡಿಯಾ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಮಾನ್ಯತೆ ಪಡೆದಿರತಕ್ಕ ಫೈನಾನ್ಸಿಯಲ್ ಏಜನ್ಸೀಸ್ ಯಾವುವು ಇದ್ದಾವೆಯೋ ಅವುಗಳ ಮೂಲಕ ಹಣ ವನ್ನು ಪಡೆದು ತನ್ನ ಜಮೀನನ್ನು ಅಭಿವೃದ್ಧಿಗೊಳಿಸಬೇಕು ಎನ್ನುವುದು ಇದರ ಮೂಲ ಉದ್ದೇಶ. ಈ ಸಂದರ್ಭದಲ್ಲಿ ಈ ತಿದ್ದುಪಡಿಯ ಬಗ್ಗೆ ಭಿನ್ನ ಭಿನ್ನವಾದ ಕೆಲವು ವ್ಯಾಖ್ಯಾನಗಳು ಬಂದಿವೆ ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಕೊಡಗಿಯವರ ಮಾತುಗಳನ್ನೇ ಉದಾಹರಿಸುವುದಾದರೆ, ಹಿಂದೆ ಇದರ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಿದಂಥ ಕಾಲದಲ್ಲಿ ೧೦೦ ರೂಪಾಯಿಗಳನ್ನು ಕೊಟ್ಟರೂ ಹಕ್ಕು ಪತ್ರ ಕೊಡತಕ್ಕದ್ದು ಇರಲಿಲ್ಲ. ನಾವು ಕೊಡತಕ್ಕ ಮೊಬಲಗು ಏನು ಇದೆ ಅದನ್ನು ಎರಡು ಯೂನಿಟ್ಸ್‌ಗಳಾಗಿ ಮಾಡಿದ್ದೇವೆ. ಹಿಂದಿನ ಸರ್ಕಾರಕ್ಕಿಂತಲೂ ಸ್ವಲ್ಪ ಹೆಚ್ಚು ಬೆನಿಫಿಟ್ಸ್ ನಾವು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಗೇಣಿದಾರ ೧೦೦ ರೂಪಾಯಿಗಳನ್ನು ಕೊಟ್ಟು ರಿಜಿಸ್ಟ್ರೇಷನ್ ಸರ್ಟಿಫಿಕೇಟ್ಸ್ ತೆಗೆದು ಕೊಂಡು ಬೇರೆ ಕಡೆಯಿಂದ ತನ್ನ ಜಮೀನು ಅಭಿವೃದ್ಧಿಗೋಸ್ಕರ ಸಾಲಗಳನ್ನು ತೆಗೆದುಕೊಳ್ಳುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಪರಿಹಾರ ಧನವನ್ನು ಕೊಡಬಾರದು ಎನ್ನುವ ಉದ್ದೇಶ ನಮಗೆ ಇಲ್ಲ. ಮುಂದೆ ಇದರ ಬಗ್ಗೆ ನಾವು ಏನು ಮಾಡಬೇಕೋ ಎನ್ನುವುದೇ ದೊಡ್ಡ ಪ್ರಶ್ನೆಯಾಗಿದೆ. ಇದನ್ನೇ ಮಾನ್ಯ ಶ್ರೀನಿವಾಸ್ ಹಾಗೂ ಮಾನ್ಯ ಪಾಟೀಲರು ಪ್ರಸ್ತಾಪ ಮಾಡಿದ್ದಾರೆ. ಇದು ದೊಡ್ಡ ಪ್ರಶ್ನೆಯೂ ಹೌದು. ಶ್ರೀಮಾನ್ ನಾಯನಕ್ ಅವರು ಲ್ಯಾಂಡ್ ಟ್ರಿಬ್ಯೂನಲ್ಸ್ ಬಗ್ಗೆ ಹೇಳಿದ್ದಾರೆ. ಭೂ ನ್ಯಾಯ ಮಂಡಳಿಗಳ ಪುನರ್ರಚನೆ ಬಹಳ ತಡವಾಗಿದೆ, ಕೂಡಲೇ ಈ ಕೆಲಸ ಮಾಡಬೇಕು ಜೊತೆಗೆ ಒಳ್ಳೆಯ ವ್ಯಕ್ತಿಗಳನ್ನು ಈ ಮಂಡಳಿಗಳಲ್ಲಿ ಹಾಕಿ, ಚೊಕ್ಕ ಕೈ ಇರತಕ್ಕವರನ್ನು ಹಾಕಿ ಎನ್ನುವ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಏನೆಂದರೆ, ನಾವು ಈಗಾಗಲೇ ಇದಕ್ಕೆ ಸಂಬಂಧಪಟ್ಟ ಮುಖ್ಯವಾದಂಥ ವಿವರವನ್ನು ನಾನು ಜಿಲ್ಲಾಧಿಕಾರಿಗಳಿಂದ ತರಿಸಿ ಇದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ದಾರಿಯಲ್ಲಿ ಇನ್ನು ಒಂದು ವಾರದಲ್ಲಿಯೇ ಇವುಗಳನ್ನು ಪುನರ್ರಚನೆ ಮಾಡಿ ಮುಗಿಸುತ್ತೇವೆ. ಇಂಥ ಒಂದು ಯೋಜನೆಯನ್ನು ನಾವು ಇಟ್ಟು ಕೊಂಡಿದ್ದೇವೆ.

ಈ ಸಂದರ್ಭದಲ್ಲಿ ಈ ಕೆಲಸ ಮಾಡಲು ಒಳ್ಳೆಯವರನ್ನು ಹಾಕಬೇಕು, ಜಮೀನುದಾರರ ಪರವಾಗಿ ರುವವರನ್ನು ಹಾಕಬಾರದು, ಹಲವಾರು ಆಸೆ ಆಮಿಷಗಳಿಗೆ ಒಳಗಾಗುವವರನ್ನು ಹಾಕಬಾರದು ಎಂಬು ದನ್ನು ನಾನು ಒಪ್ಪುತ್ತೇನೆ. ನೂರಕ್ಕೆ ನೂರರಷ್ಟು ಒಳ್ಳೆಯವರನ್ನು ಹಾಕಬೇಕೆಂಬುದನ್ನು ನಾನು ಒಪ್ಪು ತ್ತೇನೆ. ಈ ಕೆಲಸ ಮಾಡಲು ಮಾನ್ಯ ಸದಸ್ಯರು ಈ ಹಿಂದೆಯೂ ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದಾರೆ, ಈಗಲೂ ಕೊಡುತ್ತಾರೆಂದು ನಂಬಿದ್ದೇನೆ. ಈ ಮೊದಲ ಸರ್ಕಾರದವರು ಒಳ್ಳೆಯ ಆಸಕ್ತಿ ಇರುವವ ರನ್ನೇ ಇದಕ್ಕೆ ಹಾಕಬೇಕೆಂದಿದ್ದರೋ ಅಷ್ಟೇ ಆಸಕ್ತಿಯನ್ನು ನಾವೂ ಸಹ ಹೊಂದಿದ್ದೇವೆ. ಅಷ್ಟೇ ಒಂದು ಛಲ ನಮಗೂ ಇದೆ. ಒಳ್ಳೆಯವರನ್ನೇ ಹಾಕಿದ ಮೇಲೂ ಸಹ ಯಾರಾದರು ಕೆಲವರು ನ್ಯಾಯವಾಗಿ ನಡೆದುಕೊಳ್ಳದಿದ್ದರೆ, ಅಂತಹವರನ್ನು ತೆಗೆದು ಅಲ್ಲಿಗೆ ಸರಿಯಾದ ಸದಸ್ಯರನ್ನು ನೇಮಕ ಮಾಡಬೇಕಾಗು ತ್ತದೆ. ಇದನ್ನು ಬಿಟ್ಟು ಬೇರೆ ಏನಾದರು ದಾರಿ ಇದ್ದರೆ, ಆ ಬಗ್ಗೆ ಮಾನ್ಯ ಸದಸ್ಯರು ದಯಮಾಡಿ ಸಲಹೆಗಳನ್ನು ಕೊಡಬಹುದು. ಒಟ್ಟಿನಲ್ಲಿ ಈ ಭೂಸುಧಾರಣೆಯ ಕಾರ್ಯ ಒಳ್ಳೆಯ ರೀತಿಯಿಂದ ಕಾರ್ಯಗತವಾಗಬೇಕು, ಗೇಣಿದಾರರು ಉಳಿಯಬೇಕು: ಈ ದಿಶೆಯಲ್ಲಿ ಮಾನ್ಯ ಸದಸ್ಯರು ಯಾವ

ರೀತಿಯ ಸಲಹೆಗಳನ್ನು ಕೊಟ್ಟರೂ ಸಹ ಅದನ್ನು ಸರ್ಕಾರ ಸ್ವೀಕಾರ ಮಾಡಲು ಸಿದ್ಧವಿದೆ. ಈಗ ತಂದಿರುವ ತಿದ್ದುಪಡಿಯ ಬಗ್ಗೆ ಮಾನ್ಯ ದೇವೇಗೌಡರು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಮೊದಲನೆಯದಾಗಿ, ಅವರು ಸೆಕ್ಷನ್ ೫೫ರ ಬಗ್ಗೆ ಪ್ರಸ್ತಾಪ ಮಾಡಿದರು. ಇದರ ಪ್ರಕಾರ ಗೇಣಿದಾರರು ೩ ವರ್ಷದ ವರೆಗೆ ಕಂತಿನ ಹಣ ಕಟ್ಟದಿದ್ದರೆ ಅಂತಹವರು ಆ ಜಮೀನಿನ ಬಗ್ಗೆ ತಮ್ಮ ಹಕ್ಕನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ, ಇಂತಹ ಸಂದರ್ಭದಲ್ಲಿ ನೂರು ರೂಪಾಯಿಗಳನ್ನು ಪಡೆದುಕೊಂಡು ಯಾವ ರೀತಿ ಅವರಿಗೆ ಹಕ್ಕಿನ ಪತ್ರ ಕೊಡುತ್ತೀರಿ ಎಂದು ಕೇಳಿದರು. ಆದರೆ ಈಗ ಇದನ್ನು ಡಿಲೀಟ್ ಮಾಡಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಕಳವಳ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕಂತಿನ ಹಣ ಕಟ್ಟದಿದ್ದರೆ ಅದನ್ನು ಯಾವ ರೀತಿ ವಸೂಲಿ ಮಾಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ಸೆಕ್ಷನ್ ೫೫ರ ಪ್ರಕಾರ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಪ್ರಕಾರ ವಸೂಲಿ ಮಾಡಲಾಗುತ್ತದೆ.

ಶ್ರೀ ಎಚ್ ಡಿ. ದೇವೇಗೌಡ.—ಈಗ ರೈತರ ಮೇಲೆ ಎರಡು ರೀತಿಯ ಹೊರೆ ಬೀಳುತ್ತದೆ. ಒಂದು ಪಡೆದುಕೊಂಡ ಭೂಮಿಗೆ ಪರಿಹಾರದ ಹಣವನ್ನು ಕೊಡಬೇಕಾಗುತ್ತದೆ, ಎರಡನೆಯದಾಗಿ ಆ ಜಮೀನಿನ ಮೇಲೆ ಪಡೆದುಕೊಂಡಿರುವ ಸಾಲದ ಹಣವನ್ನು ತೀರಿಸಬೇಕಾಗುತ್ತದೆ. ಅವರು ಯಾವ ಒಂದು ಉದ್ದೇಶಕ್ಕಾಗಿ ಸಾಲ ಪಡೆದುಕೊಳ್ಳುತ್ತಾರೋ, ಆ ಸಾಲವನ್ನು ಅದೇ ಉದ್ದೇಶಕ್ಕಾಗಿ ಖರ್ಚು ಮಾಡುತ್ತಾರೆಯೇ ಎಂದು ಆ ಸಾಲವನ್ನು ಅದೇ ಉದ್ದೇಶಕ್ಕಾಗಿ ಖರ್ಚು ಮಾಡುತ್ತಾರೆಯೇ ಎಂದು ಅವರ ಮೇಲೆ ಎಚ್ಚರಿಕೆ ವಹಿಸುವುದಕ್ಕೆ ಸರ್ಕಾರದ ಹತ್ತಿರ ಯಾವ ಸಾಧನವೂ ಇಲ್ಲ. ಭೂ ಅಭಿವೃದ್ಧಿಗೆ ಇಲ್ಲವೇ ಬೆಳೆ ತೆಗೆಯಲು ೫ ಸಾವಿರ ರೂ. ಸಾಲ ತೆಗೆಯಬಹುದು. ಆ ಸಾಲವನ್ನು ಅವರು ವಾಪಸ್ ಮಾಡದಿದ್ದಾಗ ಅದನ್ನು ಸಹ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಪ್ರಕಾರವೇ ವಸೂಲಿ ಮಾಡಬೇಕಾಗುತ್ತದೆ ಅಲ್ಲವೇ?

ಶ್ರೀ ಎಸ್. ಬಂಗಾರಪ್ಪ.—ಹೌದು.

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ವಸೂಲಿ ಮಾಡಲು ಸಾಧ್ಯವಾಗದಿದ್ದಾಗ ಆ ಭೂಮಿಯನ್ನು ಹರಾಜು ಮಾಡಬೇಕಾಗುತ್ತದೆ ಅಲ್ಲವೇ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಪರಿಹಾರದ ಹಣವನ್ನು ೩ ವರ್ಷದವರೆಗೂ ಕಟ್ಟದಿದ್ದರೆ ಸ್ವಲ್ಪ ಕಾಲಾವಕಾಶ ಕೊಡುತ್ತೇವೆ. ಆಗಲೂ ಕಟ್ಟದಿದ್ದರೆ ಅದನ್ನು ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಪ್ರಕಾರ ವಸೂಲಿ ಮಾಡಲಾಗುತ್ತದೆಂದು ಈಗಾಗಲೇ ಹೇಳಿದೆ. ಇಲ್ಲಿ ನಾವು ರೆಕವರೀ ದೃಷ್ಟಿಯಿಂದಲೇ ನೋಡುವುದು ಸರಿಯಲ್ಲ. ಏಕೆಂದರೆ, ಉಳುವವನೇ ಭೂಮಿಯ ಒಡೆಯನಾಗಬೇಕೆಂದು ನಾವು ಜಮೀನು ಕೊಡುತ್ತೇವೆ. ಅವರು ಆ ಜಮೀನಿನಲ್ಲಿ ಉತ್ಪನ್ನ ತೆಗೆಯಬೇಕೆಂದು ಕೊಡುತ್ತೇವೆ. ಆ ರೀತಿ ಮಾಡದಿದ್ದರೆ ಬಾಕಿ ಹಣವನ್ನು ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಪ್ರಕಾರವೇ ವಸೂಲಿ ಮಾಡಬೇಕಾಗುತ್ತದೆ. ಅಷ್ಟೇ ಹೊರತು ಬೇರೆ ದಾರಿ ಇಲ್ಲ.

ಇನ್ನು ಬಡ ಭೂ ಮಾಲೀಕರಿಗೆ ಪರಿಹಾರ ಕೊಡುವ ಬಗ್ಗೆ ಮಾನ್ಯ ದೇವೇಗೌಡರು ಪ್ರಸ್ತಾಪ ಮಾಡಿದ್ದಾರೆ. ಮತ್ತು ಬಡ ಗೇಣಿದಾರರಿಗೆ ಅನ್ಯಾಯವಾಗಿರುವ ಬಗ್ಗೆಯೂ ಅವರು, ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಅವರು ಈ ಹಿಂದೆಯೂ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಹೊಳೆನರಸೀಪುರದಲ್ಲಿ ಗೇಣಿದಾರರ ಸ್ವಾಧೀನದಲ್ಲಿ ಜಮೀನುಗಳು ಇದ್ದರೂ ಸಹ ೨೫-೩೦ ಕೇಸ್‌ಗಳಲ್ಲಿ ಅನ್ಯಾಯವಾಗಿವೆ ಎಂದು ಅವರು ಈ ಮೊದಲು ಹೇಳಿದ್ದು ನನ್ನ ನೆನಪಿನಲ್ಲಿದೆ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳ ಮೂಲಕ ಅದನ್ನು ವಿಚಾರಣೆ ಮಾಡಿಸುತ್ತೇನೆಂದು ಹೇಳಿದ್ದು ನನ್ನ ನೆನಪಿನಲ್ಲಿದೆ. ನಂತರ ಏನಾಯಿತು ಗೊತ್ತಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ಈ ಹಿಂದಿನ ಸರ್ಕಾರದವರು ಇದಕ್ಕೆ ಸಂಬಂಧಪಟ್ಟಂತೆ ಅಲ್ಲಿನ ಜಿಲ್ಲಾಧಿಕಾರಿಯವರಿಂದ ವರದಿ ತರಿಸಿಕೊಂಡು, ಅಲ್ಲಿ ನಡೆದಿರುವಂತಹ ಅಕ್ರಮಗಳನ್ನು ಒಪ್ಪಿಕೊಂಡಿದ್ದಾರೆ. ನಂತರ ಅನ್ಯಾಯವಾಗಿರುವವರು ಹೈಕೋರ್ಟಿಗೆ ಅಪೀಲು ಹೋಗಬಹುದೆಂದು ತಿಳಿಸಿದರು.

ಅದರಂತೆ ಅವನು ಅಪೀಲು ಹೋದರು. ಹೈಕೋರ್ಟಿನ ನ್ಯಾಯಾಧೀಶರು ಆ ಕೇಸ್‌ಗಳನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಸಂಬಂಧಪಟ್ಟ ಭೂ ನ್ಯಾಯಮಂಡಳಿಗೆ ಕಳುಹಿಸಿಕೊಟ್ಟರು. ಆ ಭೂ ನ್ಯಾಯಮಂಡಲಿಯ ನ್ಯಾಯಾಧೀಶರು ಪುನಃ ವಿಚಾರಣೆ ಮಾಡಿದರು. ಈ ಮೊದಲು ತೆಗೆದುಕೊಂಡ ಹಣಕ್ಕೆ ದ್ರೋಹ ಮಾಡಬಾರದೆಂದು ಈ ಮೊದಲು ಕೊಟ್ಟ ಆರ್ಡರ್‌ಗೇ ಮಾನ್ಯತೆ ಕೊಟ್ಟರು. ಮಾನ್ಯ ಮಂತ್ರಿಗಳು ಬೇಕಾದರೆ ಹೊಳೆನರಸೀಪುರದ ಭೂ ನ್ಯಾಯ ಮಂಡಳಿಯಿಂದ ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ತರಿಸಿ ನೋಡಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಈಗ ಏನು ಹೇಳಿದ್ದಾರೆ, ಅದರ ಬಗ್ಗೆ ನಾನು ಸಂಪೂರ್ಣವಾದ ವರದಿ ತರಿಸಿಕೊಳ್ಳುತ್ತೇನೆ. ಈ ಕೇಸ್‌ಗಳು ಹೈಕೋರ್ಟಿಗೂ ಹೋಗಿದ್ದವು ಎಂಬುದು ನನಗೆ ಗೊತ್ತಿರಲಿಲ್ಲ. ಹೈಕೋರ್ಟಿನವರು ಆ ಕೇಸ್‌ಗಳನ್ನು ವಾಪಸ್ ಭೂ ನ್ಯಾಯಮಂಡಲಿಗೆ ಕಳುಹಿಸಿ ಕೊಟ್ಟಮೇಲೆ ಅಲ್ಲಿ ಗೇಣಿದಾರರ ಪರವಾಗಿ ಎಷ್ಟು ಅರ್ಜಿಗಳನ್ನು ಇತ್ಯರ್ಥ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಇದರ ಬಗ್ಗೆ ನಾನು ಸಂಪೂರ್ಣವಾದ ವರದಿಯನ್ನು ತರಿಸಿಕೊಂಡು ನೋಡುತ್ತೇನೆ. ಗೇಣಿದಾರರ ಸ್ವಾಧೀನದಲ್ಲಿ ಜಮೀನು ಇದ್ದರೂ ಸಹ, ಆ ಜಮೀನು ಅವರ ಸ್ವಾಧೀನದಲ್ಲಿ ಇಲ್ಲ ಎಂದು ಜಡ್ಜ್‌ಮೆಂಟ್ ಬರೆದು, ಸಂಬಂಧ ಪಟ್ಟವರು ಹೈಕೋರ್ಟಿಗೆ ಹೋಗುವಂತೆ ಮಾಡಿದಂತಹವರು ಯಾರೇ ಇರಲಿ, ಅವರು ಪುನಃ ಭೂ ನ್ಯಾಯಮಂಡಲಿಯ ಸದಸ್ಯರಾಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಅಂತಹವರು ಏನಾದರೂ ಮತ್ತೆ ಅಲ್ಲಿ ತೂರಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಅದಕ್ಕೆ ನಾವು ಪ್ರತಿ ಬಂಧಕ ಹಾಕುತ್ತೇವೆ,

ಶ್ರೀ ಎಚ್. ಡಿ. ದೇವೇಗೌಡ. —ನೀವು ಅಧಿಕಾರಕ್ಕೆ ಬಂದ ೪೮ ಗಂಟೆಯೊಳಗೇ ಅಲ್ಲಿ ಬಹಳ ಬದಲಾವಣೆಗಳಾದವು.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ನಾನು ಸಂಪೂರ್ಣವಾದ ವಿವರಗಳನ್ನು ತರಿಸಿಕೊಂಡು ನೋಡುತ್ತೇನೆ. ಮತ್ತು ಮುಂದೆ ಅದರ ಬಗ್ಗೆ ಏನು ಕ್ರಮ ಕೈಕೊಳ್ಳಲಾಯಿತೆಂಬುದನ್ನು ಈ ಮಾನ್ಯ ಸಭೆಗೆ ಹೇಳುತ್ತೇನೆ.

೫–೩೦ ಪಿ.ಎಂ.

ಆ ಸಂದರ್ಭ ಬಂದಾಗ ಬಜೆಟ್ ಸೆಷನ್‌ನಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾತನಾಡಿರತಕ್ಕ ಎಲ್ಲಾ ಸದಸ್ಯರು ಹೆಚ್ಚು ಕಡಿಮೆ ಒಂದು ಅಭಿಪ್ರಾಯವನ್ನು ಪಟ್ಟಿದ್ದಾರೆ. ಉಳುವವನೇ ಹೊಲದೊಡೆಯ ಆಗತಕ್ಕ ಒಂದು ಮೂಲಭೂತವಾದ ವಾದವನ್ನು ಒಪ್ಪಿದ ಮೇಲೆ ಪರಿಹಾರ ಹಣವನ್ನು ಏತಕ್ಕೆ ಕೊಡಬೇಕು ಎಂದು ಹೇಳುತ್ತಿದ್ದಾರೆ. ಶ್ರೀಮಾನ್ ಕೆ ಎಚ್. ಶ್ರೀನಿವಾಸ್ ಅವರು ತಮ್ಮ ಭಾಷಣದಲ್ಲಿ ಪೊಲಿಟಿಕಲ್ ವಿಲ್ ಬೇಕು ಹಣದ ಪ್ರಶ್ನೆ ಇಲ್ಲ ಎಂದು ಹೇಳಿದರು. ಇದರಲ್ಲಿ ಹಣಕಾಸಿನ ಪ್ರಶ್ನೆ ಸ್ಪಷ್ಟವಾಗಿದೆ. ರಾಜ್ಯ ಸರ್ಕಾರದವರು ಭರಿಸತಕ್ಕ ಪ್ರಶ್ನೆ ಇರಲಿ, ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಆಗಲಿ, ಪ್ಲಾನ್‌ಗೆ ಸೇರಿಸಬೇಕು ಎನ್ನುವುದಾಗಲೀ ಅದರ ವಿವರಣೆಗೆ ನಾನು ಹೋಗುವುದಿಲ್ಲ. ಉಳುವವನೇ ಹೊಲದೊಡೆಯ ಎನ್ನುವಂಥ ವಾದವನ್ನು ಒಪ್ಪಿ ಭೂಸುಧಾರಣಾ ಕಾನೂನನ್ನು ತರತಕ್ಕ ಪ್ರಯತ್ನವನ್ನು ಅನೇಕ ರಾಜ್ಯ ಸರ್ಕಾರದವರು ಮಾಡಿದ್ದಾರೆ. ಅವರವರ ರಾಜ್ಯಕ್ಕೆ ಸಂಬಂಧ ಪಟ್ಟ ಹಾಗೆ ಮಾಡಿಕೊಂಡಿದ್ದಾರೆ. ನಮಗೆ ಸಂಬಂಧಪಟ್ಟ ಹಾಗೆ ನಾವೂ ಮಾಡಿದ್ದೇವೆ. ನಮ್ಮ ಭೂ ಸುಧಾರಣಾ ಕಾನೂನನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮದು ಒಂದು ರೀತಿಯಾದ ಕ್ರಾಂತಿ ಕಾರಕವಾದ ಕಾನೂನು ಎಂದು ಹೇಳಿದರು ; ಅದು ನಿಜ. ಆದರೆ ಪಕ್ಕಾ ಕ್ರಾಂತಿಕಾರಕ ಎಂದು ಹೇಳುವ ಹಾಗಿಲ್ಲ ಎಂದು ಹೇಳಿದರು. ಅದು ಸಂತೋಷ ಕ್ರಾಂತಿಕಾರಕ ಆಗಬೇಕು ಎನ್ನುವುದಾದರೆ, ಉಳುವವನೇ ಹೊಲದೊಡೆಯ ಆಗಬೇಕಾದರೆ ಕಂತಿನ ಮೂಲಕ ಹಣವನ್ನು ಕೊಡದೇ ಮಾಡುವುದು ನಿಜವಾದ ಕ್ರಾಂತಿಕಾರಕ ಕಾನೂನೇ. ಆದರೆ ಹಣದ ಪರಿಸ್ಥಿತಿ ವಿಷಯದಲ್ಲಿ ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ತೊಳಲಾಡುತ್ತಿದ್ದಾರೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಇವರಿಂದ ಹಣವನ್ನು ಪಡೆದುಕೊಳ್ಳಬಾರದು ಎಂದು ಹೇಳುವುದಿಲ್ಲ. ಹಣವನ್ನು ಪಡೆದುಕೊಳ್ಳುವ ವಿಷಯದಲ್ಲಿ ಮಾಲೀಕರಿಗೂ ಇವರಿಗೂ ಕೊಂಡಿ ಹಾಕಿಕೊಂಡು ಕುಳಿತುಕೊಂಡಿದ್ದೇವೆ. ಇದರಿಂದ ಎರಡೂ ಕೆಲಸಗಳೂ ಆಗುತ್ತಾ ಇಲ್ಲ. ಅವರಿಂದ ಹಣವನ್ನು

ಪಡೆದುಕೊಳ್ಳತಕ್ಕಂಥ ಕೆಲಸವೂ ಆಗುತ್ತಾ ಇಲ್ಲ, ಅವರು ಭೂಮಾಲೀಕರೂ ಆಗುತ್ತಾ ಇಲ್ಲ. ಅವರಿಗೆ ಹಣ ಕೊಡತಕ್ಕ ಶಕ್ತಿ ಬರಬೇಕಾದರೆ ಮೊದಲು ಅವರನ್ನು ಭೂಮಾಲೀಕರನ್ನಾಗಿ ಮಾಡಿಬಿಡಿ. ಅವರಿಗೆ ಶಕ್ತಿ ಬರುತ್ತದೆ. ಆಮೇಲೆ ರಾಜ್ಯದ ದೃಷ್ಟಿಯಿಂದ, ರಾಷ್ಟ್ರದ ದೃಷ್ಟಿಯಿಂದ ಎಷ್ಟು ತೆರಿಗೆ ಹಾಕಬೇಕು ಎಂದು ಯೋಚನೆ ಮಾಡಿ ಹಾಕಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್ ಬಂಗಾರಪ್ಪ.—ಅದು ಬಹಳ ದೊಡ್ಡ ವಿಷಯ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ದೊಡ್ಡ ವಿಷಯ ಏನಲ್ಲ. ತತ್ವ ಒಪ್ಪಿಕೊಂಡಿದ್ದೀರಿ.

Let me pinpoint a point of view ; he may answer it now alone ; he need not tranverse the ground which he has already covered. We are all addressing overselves on a vital point.

VICE CHAIRMAN.—If you are not satisfied with his reply, you can ask for his explanation later on.

SRI A. LAKSHMI SAGAR.—I only want to avoid any further explanation. If the Government is satisfied about the central point at issue viz., that every tenant declared by the Land Tribunal to be occupant of the land must be immediately given the patta, he mus be the owner of the land. The only difficulty you are telling us the same thing the previous Government also told us, is about the financial implications. You can agree with the view expressed by Sri K. H. Srinivas. Where there is a will there is a way ; financial implication is not a big problem ; why are you doing it in this slipshod way ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್ ಅವರು ಹೇಳಿರತಕ್ಕ ಮಾತನ್ನೇ ಕೆಲವೊಂದು ಪದಗಳಲ್ಲಿ ಬೇರೆ ರೀತಿಯಲ್ಲಿ ಹೇಳಿದ್ದಾರೆ ಅಷ್ಟೆ. ನಾನು ಈಗಾಗಲೇ ಹೇಳಿದ್ದೇನೆ. ಇದರಲ್ಲಿ ಹಣಕಾಸಿನ ಪ್ರಶ್ನೆ ಇರತಕ್ಕಂಥಾದ್ದು ನಿಜ. ಒಂದು ವೇಳೆ ಪರಿಹಾರದ ಹಣ ಇಲ್ಲದೆ ಗೇಣೀದಾರರನ್ನು ಹೊಲದೊಡೆಯನನ್ನಾಗಿ ಮಾಡಬೇಕು ಎನ್ನುವುದಾದರೆ, ಇದನ್ನು ಯಾವ ರೀತಿ ಮಾಡಬೇಕು ಎಂದು ಯೋಚನೆ ಮಾಡಿ ಹೇಳತಕ್ಕಂಥ ವಿಚಾರ, ಅಷ್ಟು ಸುಲಭವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ, ಅದನ್ನು ಮತ್ತೆ ನೋಡೋಣ, ವಿಚಾರ ಮಾಡೋಣ. ಸಮಗ್ರವಾಗಿರತಕ್ಕಂಥ ತಿದ್ದುಪಡಿ ಮಸೂದೆಯನ್ನು ಈ ಭೂಸುಧಾರಣಾ ಕಾನೂನಿಗೆ ತರಬೇಕು ಎನ್ನತಕ್ಕಂಥ ಉದ್ದೇಶವನ್ನು ಸರ್ಕಾರ ಈಗಾಗಲೇ ಇಟ್ಟುಕೊಂಡಿದೆ. ಇದೇ ಬಜೆಟ್ ಅಧಿವೇಶನದಲ್ಲಿ ಈಗಿರತಕ್ಕ ಭೂಸುಧಾರಣಾ ಕಾನೂನಿಗೆ ಸಮಗ್ರವಾದ ತಿದ್ದುಪಡಿ ಮಸೂದೆಯ ನ್ನು ತರುತ್ತೇವೆ. ಆ ಕಾಲದಲ್ಲಿ ಈಗ ಮಾನ್ಯ ಸದಸ್ಯರು ಏನೇನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆ ಎಲ್ಲಾ ವಿಷಯಗಳನ್ನೂ ಗಣನೆಗೆ ತೆಗೆದುಕೊಂಡು ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ತರತಕ್ಕ ಪ್ರಯತ್ನವನ್ನು ಮಾಡೋಣ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಇನ್ನು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಒಂದು ಭೂಮಿ ಇರುತ್ತದೆ, ಅದರಲ್ಲಿ ಎರಡು ಯೂನಿಟ್ಸ್ ಇರುತ್ತದೆ, ಏನು ಎಂದು ಗೊತ್ತಾಗುವುದಿಲ್ಲ ಎಂದು ಶ್ರೀಮಾನ್ ರಾಜೇಗೌಡರು ಹೇಳಿದರು. ಸೆಕ್ಷನ್ ೪೮ಎ ನಲ್ಲಿ ಇದೆ. ಫಾರಂ ೭ರಲ್ಲಿ ಸ್ಪಷ್ಟವಾಗಿದೆ Supposing a tenant is cultivating at three different places the lands owned by three different landlords ಮೂರನ್ನೂ ಬರೆಯತಕ್ಕ ಅವಕಾಶ ಇದೆ. ೨ ಯೂನಿಟ್ಸ್‌ಗೆ ಬರುತ್ತಾನೊ ಇಲ್ಲವೋ ಎಂದು ನೋಡಿಕೊಳ್ಳಬಹುದು. ಅವರದೇನೂ ತೊಂದರೆಯಾಗುವುದಿಲ್ಲ.

ಶ್ರೀ ರಾಜುಗೌಡ.—ಒಂದು ಪ್ರಕರಣ ಇತ್ಯರ್ಥವಾದ ತಕ್ಷಣ ಪಟ್ಟಾ ಕೊಡಿ ಎಂದರೆ ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮೂರು ಭೂಮಿಗೆ ಹಾಕಿದ್ದಾರೆ. ಒಂದು ವೇಳೆ ೨ ಯೂನಿಟ್ಸ್ ಬಂದರೆ ಅಪ್ಲೈ ಆಗುವುದಿಲ್ಲ. ೨ ಯೂನಿಟ್ಸ್ ಜಾಸ್ತಿಯಾಗುತ್ತದೆ. This is not applicable to him, this is simple and logical. ಒಂದು ವೇಳೆ ೩ ಭೂಮಿ ಇದ್ದರೂ ಕೂಡ ೨ ಯೂನಿಟ್ಸ್‌ಗಿಂತ ಒಳಗೆ ಬರುವುದಾದರೆ ಅನ್ವಯವಾಗುತ್ತದೆ. ಭೂನ್ಯಾಯ ಮಂಡಲಿ ಇದನ್ನು ನೋಡಿ ತೀರ್ಮಾನ ಮಾಡುವುದಕ್ಕೆ ಬರುತ್ತದೆ, ತೊಂದರೆ ಬರಲಾರದು. ಮಾನ್ಯ ಕಕ್ಕಿಲಾಯರವರು ಒಂದು ವಿಚಾರವನ್ನು ಹೇಳಿದರು ಪಟ್ಟಾ, ಸರ್ಟಿಫಿಕೇಟ್ ಆಫ್ ರಿಜಿಸ್ಟ್ರೇಷನ್ ಎನ್ನತಕ್ಕಂತಾದ್ದನ್ನು ಭೂಸುಧಾರಣಾ ಕಾನೂನಿನನ್ವಯ ಮಾಡಿದ್ದಾರೆ, ಹಿಡುವಳಿ ಹಕ್ಕು ಪತ್ರ, ಓನರ್‌ಷಿಪ್ ಇಲ್ಲದೇ ಹೋದರೆ ಬ್ಯಾಂಕಿನವರು ಸಾಲ ಕೊಡುವುದಿಲ್ಲ. ಅತಿ ಭೋಗದಾರ ಸಂಪೂರ್ಣ ಹಕ್ಕನ್ನು ಪಡೆಯುತ್ತಾನೆ. ಅವನು ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂದು ಹೇಳಿದರು. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಅನುಮಾನ ಅಥವಾ ಶಂಕೆ ಬೇಕಾಗಿಲ್ಲ. ಇದು ಹಿಂದೆ ಕೂಡ ಇತ್ತು, ನಾವೇನು ಹೊಸದಾಗಿ ತಂದಿಲ್ಲ. ಅವನಿಗೆ ಹಕ್ಕಿದೆ, ಅವನು ಸಾಲ ತೆಗೆದುಕೊಂಡು ಭೂಮಿಯಲ್ಲಿ ಇನ್ನೂ ಚೆನ್ನಾಗಿ ಕೃಷಿ ಮಾಡುವುದಕ್ಕೆ, ಭೂಮಿಯನ್ನು ಉತ್ತಮ ಸ್ಥಿತಿಯಲ್ಲಿ ತರುವುದಕ್ಕೆ ಸಾಲ ತೆಗೆದುಕೊಳ್ಳುವುದಕ್ಕೆ ಸ್ಪಷ್ಟವಾಗಿ ಹಕ್ಕಿದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಕಮರ್ಷಿಯಲ್ ಬ್ಯಾಂಕ್‌ನವರು ಸಾಲ ಕೊಡುವುದಕ್ಕೆ ದಾರಿ ಇರುತ್ತದೆ. ಪರಭಾರೆ ವಿಷಯವನ್ನು ಹೇಳತಕ್ಕ ಕಾಲದಲ್ಲಿ ಸೆಕ್ಷನ್ ೬೧ ಕ್ಲಾಸ್ ೨ನಲ್ಲಿ ಪರಭಾರೆ ಮಾಡುವುದಕ್ಕೆ ಹೋದರೆ ಶಿಕ್ಷೆ ಏನು ಎನ್ನುವುದನ್ನು ಹೇಳಲಾಗಿದೆ. ಸೆಕ್ಷನ್ ೬೧ ಕ್ಲಾಸ್ ೨ ನಲ್ಲಿ ಬೇರೆ ಬೇರೆ ವೈಯುಕ್ತಿಕವಾಗಿ ಖಾಸಗಿ ವ್ಯಕ್ತಿಗಳಿಗೆ ಸಾಲ ವಸೂಲಿ ಮಾಡುವುದಕ್ಕೆ ಬರುವುದಿಲ್ಲ. "Section 6!(2) Recognised financial agency or institution..."

ಶ್ರೀ ಎಸ್. ಬಂಗಾರಪ್ಪ.—ಸ್ಟೇಟ್ ಬ್ಯಾಂಕ್‌ಗಳಲ್ಲಿ, ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳ ಮೂಲಕ ಸಾಲವನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಿಟ್ಟಿದ್ದೇವೆ. ಇದರ ಬಗ್ಗೆ ಏನೂ ಅನುಮಾನ ಪಡಬೇಕಾಗಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.—ನೂರು ರೂಪಾಯಿ ಕೊಟ್ಟರೆ ಅವನಿಗೆ ಸರ್ಟಿಫಿಕೇಟ್ ಕೊಡುತ್ತೀರಿ. ಅದಾದ ಮೇಲೆ ಅವನು ಪರಿಹಾರ ಧನವನ್ನು ಕಂತುಗಳಲ್ಲಿ ಗೇಣಿದಾರ ಕೊಡಬೇಕಾಗುತ್ತದೆ, ಅಥವಾ ಕೊಡಬೇಕಾದ ಅವಶ್ಯಕತೆ ಇಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಕೊಡಲೇ ಬೇಕಾಗುತ್ತದೆ. ಇವತ್ತು ಬಹಳ ಕಷ್ಟದಲ್ಲಿರತಕ್ಕ ಗೇಣಿದಾರರಿಗೆ ಸ್ವಲ್ಪ ಬೇರೆ ತರಹದ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕು ಎನ್ನುವುದರ ಬಗ್ಗೆ ನಾವು ಇನ್ನು ಸಮಗ್ರವಾದ ಶಾಸನವನ್ನು ತರುವವರಿದ್ದೇವೆ ಎಂದು ಉತ್ತರ ಕೊಟ್ಟಿದ್ದೇನೆ ಸಮಗ್ರವಾದ ತಿದ್ದುಪಡಿ ಶಾಸನವನ್ನು ತರುವಂಥ ಸಂದರ್ಭದಲ್ಲಿ ಇವುಗಳನ್ನೆಲ್ಲಾ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ನಾನು ಈಗಾಗಲೇ ಹೇಳಿದ ಹಾಗೆ ಭೂ ನ್ಯಾಯ ಮಂಡಲಿಗಳನ್ನು ಶೀಘ್ರವಾಗಿ ರಚನೆ ಮಾಡಬೇಕಾಗಿದೆ. ಎಲ್ಲಾ ಭೂ ನ್ಯಾಯ ಮಂಡಳಿಗಳನ್ನು ತ್ವರಿತ ಗತಿಯಲ್ಲಿ ಮಾಡಬೇಕಾಗಿದೆ. ಇದನ್ನು ಆದಷ್ಟು ಬೇಗ ಮಾಡಿ ಮುಗಿಸಬೇಕಾಗಿದೆ. ಇದನ್ನು ಆದಷ್ಟು ಬೇಗನೆ ಮಾಡುವುದರಿಂದ ಯಾರು ನಿಜವಾದ ನ್ಯಾಯವಾಗಿ ಗೇಣಿದಾರರಿಗೆ ನ್ಯಾಯ ದೊರಕಬೇಕಾಗಿದೆ. ಅವರಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಬೇಗನೆ ಮಾಡಬೇಕಾಗಿದೆ. ಬರೀ ಭೂಸುಧಾರಣಾ ಕಾನೂನು ಬೋರ್ಡ್‌ನ್ನು ಹಚ್ಚಿ ಎಂದು ಹೇಳತಕ್ಕಂಥ ಮಾತು ಸರಿಯಲ್ಲ ಅವನ್ನು ನಾನು ಒಪ್ಪುತ್ತೇನೆ. ಸರ್ಕಾರ ಕೂಡ ಮನಗಂಡಿದೆ ಅಂತ ಹೇಳುತ್ತಾ ಇನ್ನು ಉಳಿದರತಕ್ಕಂಥ ಎಲ್ಲ ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅನೇಕ ವಿಷಯಗಳಿಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮಾನ್ಯ ಶ್ರೀ ಕೊಡಗಿಯವರು ಇರಲಿಲ್ಲ, ಅವರು ಪ್ರಸ್ತಾಪ ಮಾಡಿದ ವಿಷಯಕ್ಕೂ ಉತ್ತರ ಕೊಟ್ಟೆ.

ಶ್ರೀ ಎ.ಜಿ. ಕೊಡಗಿ.—ಒಂದು ನೂರು ರೂಪಾಯಿ ಗೇಣಿದಾರ ಕೊಟ್ಟರೆ ನೀವು ಅವನಿಗೆ ಹಕ್ಕು ಪತ್ರವನ್ನು ಕೊಡುತ್ತೀರಿ. ಆ ಮೇಲೆ ಅವನು ಬ್ಯಾಂಕ್‌ನಿಂದ ಸಾಲ ಪಡೆಯುತ್ತಾನೆ ಅನಂತರ ಅವರಿಂದ ಆಗತಕ್ಕಂಥ ಕಾನೂನಿನ ತೊಡಕನ್ನು ಮಾನ್ಯ ಶ್ರೀ ದೇವೇಗೌಡರವರು ಹೇಳಿದ್ದಾರೆ. ಅವನು ಸಾಲ ಮಾಡಿ ೩-೪ ವರ್ಷಗಳಾದರೂ ಸಾಲ ಮರು ಪಾವತಿ ಮಾಡುವುದಿಲ್ಲ, ಕಂತು ಕಟ್ಟದೆ ಹೋದರೆ ಪರಿಸ್ಥಿತಿ ಏನಾಗುತ್ತದೆ ? ಸಾಲ ಹೆಚ್ಚಾಗಿರುತ್ತದೆ, ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುತ್ತದೆ.

ಆಗ ಸರ್ಕಾರಕ್ಕೂ ಕೂಡ ಒಂದು ಲೈಯಬಿಲಿಟಿ ಆಯಿತು, ಸಾಲ ಕೂಡ ಬರುತ್ತದೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ ಪುನಃ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸಮಗ್ರವಾದ ಶಾಸನ ತಂದಾಗ ನೋಡೋಣ. ನಾವು ತಂದಿರತಕ್ಕಂಥ ತಿದ್ದುಪಡಿ ಲ್ಯಾಪ್ಸ್ ಆಗಬಾರದೆಂದು ಈಗ ಇದನ್ನು ತುರ್ತಾಗಿ ತಂದಿದ್ದೇವೆ, ಈ ಬಡ್ಜೆಟ್ ಅಧಿವೇಶನದಲ್ಲಿಯೇ ಸಮಗ್ರವಾಗಿ ತರತಕ್ಕಂಥ ಪ್ರಶ್ನೆ ಇರುವುದರಿಂದ ಎಲ್ಲಾ ವಿಷಯಗಳನ್ನು ಮನದಲ್ಲಿಟ್ಟುಕೊಂಡು ತರುತ್ತೇವೆ. ಮಾನ್ಯ ಶ್ರೀ ಕೆ.ಎಚ್. ಶ್ರೀನಿವಾಸ್‌ರವರು ನಾವು ಗೇಣಿದಾರರ ಪರವಾಗಿಯೇ ಮೊದಲಿನಿಂದಲೂ ಹೋರಾಟ ಮಾಡಿಕೊಂಡು ಬಂದಿರತಕ್ಕವರು ಎಂದು ಹೇಳಿದರು ಅದನ್ನು ಒಪ್ಪತಕ್ಕವರಲ್ಲಿ ನಾನು ಒಬ್ಬನೇ, ನಾನು ಹೊಸದಾಗಿ ರಾಜಕೀಯಕ್ಕೆ ಬಂದಾಗ ಶ್ರೀ ಜೆ.ಎಚ್. ಪಟೇಲರು ಮತ್ತು ದಿವಂಗತ ಗೋಪಾಲಗೌಡರವರು ಕಾಗೋಡು ಸತ್ಯಾಗ್ರಹ ಮಾಡಿದ್ದು ಇವತ್ತಿಗೂ ನೆನಪಿದೆ. ಬರೀ ಕಾಗೋಡಿನಲ್ಲಿ ಮಾತ್ರವೇ ಅಲ್ಲ ಬೇರೆ ಇತರ ಕಡೆಗಳಲ್ಲಿ ಹೋಗಿ ಜನ ಭಾಗವಹಿಸಿದ್ದರು. ಇದರಲ್ಲಿ ಬರೀ ಸತ್ಯಾಗ್ರಹದ ಪ್ರಶ್ನೆ ಒಂದೇ ಅಲ್ಲ, ಅವರ ಬಗ್ಗೆ ಅನುಕಂಪ, ಕರುಣೆ ಜೊತೆಗೆ ಒಂದು ಸಿದ್ಧಾಂತದ ಪ್ರಶ್ನೆ ಕೂಡ ಇದೆ, ದುಡಿಸಿಕೊಳ್ಳುವವನೊಬ್ಬ, ದುಡಿಯುವವನೊಬ್ಬ, ಇದನ್ನು ನಾವು ಪ್ರಜಾಪ್ರಭುತ್ವದಲ್ಲಿ ಒಪ್ಪುವುದಕ್ಕೆ ಆಗುವುದಿಲ್ಲ. ಇದೆಲ್ಲಾ ಸಂಪೂರ್ಣವಾಗಿ ಇತ್ಯರ್ಥವಾಗಬೇಕು ಎನ್ನತಕ್ಕ ಮೂಲೋದ್ದೇಶದಿಂದ ಕಾನೂನು ಹುಟ್ಟಿತು. ಕೆಲವು ಬೇಡಿಕೆಗಳಿಗೆ ಕೈಎತ್ತಿ ಬೆಂಬಲ ಕೊಟ್ಟುಬಿಡುತ್ತಾರೆ ಎಂದು ಹೇಳಬಹುದು. ಕೆಲವೊಂದು ವಿಷಯಗಳಲ್ಲಿ ಮಾತ್ರ ವಿವಾದಾತ್ಮಕವಾದ ಅಭಿಪ್ರಾಯಗಳನ್ನು ಮಾನ್ಯ ಸದಸ್ಯರುಗಳು ಹೊಂದಿರಬಹುದು. ಆದರೆ ಈ ಒಂದು ಅಭಿಪ್ರಾಯದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳೂ ಒಂದೇ ಭಾವನೆಯನ್ನು ಹೊಂದಿದ್ದಾರೆ. ೧–೩–೧೯೭೪ರಲ್ಲಿ ಏನು ಒಂದು ದೊಡ್ಡ ಪರಿಣಾಮಕಾರಿಯಾದ ಭೂ ಸುಧಾರಣಾ ಕಾನೂನು ಬಂತು ಆಗ ನನಗೆ ಇನ್ನೂ ನೆನಪಿನಲ್ಲಿದೆ ವಿರೋಧ ಪಕ್ಷದವರು, ಆಳುವ ಪಕ್ಷದವರು ಎಲ್ಲರೂ ಸರ್ವಾನುಮತದಿಂದ ಒಪ್ಪಿ ಪಾಸ್ ಮಾಡಿದ್ದನ್ನು ಕಣ್ಣಾರೆ ಕಂಡಿದ್ದೇನೆ ಅದನ್ನು ಇನ್ನೂ ನಾನು ಮರೆತಿಲ್ಲ. ಒಳ್ಳೆಯ ಪ್ರಗತಿಪರವಾದ ಕಾನೂನು ತನ್ನಿ ಎನ್ನತಕ್ಕ ಅಭಿಪ್ರಾಯವನ್ನು ಸದಸ್ಯರುಗಳು ಕೊಟ್ಟಿದ್ದಾರೆ, ಅದೇ ಅಭಿಪ್ರಾಯವನ್ನು ನಮ್ಮ ಸರ್ಕಾರ ಇಟ್ಟುಕೊಂಡಿದೆ. ಆದುದರಿಂದ ಮುಂದೆ ಬರತಕ್ಕಂಥ ಬಡ್ಜೆಟ್ ಅಧಿವೇಶನದಲ್ಲಿ ಸಮಗ್ರವಾದ ಶಾಸನ ತರತಕ್ಕಂಥ ಸಮಯದಲ್ಲಿ ಎಲ್ಲರ ಸಲಹೆಗಳನ್ನು ಕ್ರೋಢೀಕರಿಸಿ, ಅವುಗಳನ್ನೆಲ್ಲಾ ಅಭ್ಯಾಸ ಮಾಡಿ ತಮ್ಮ ಮುಂದೆ ಇಡುತ್ತೇನೆ. ನನಗೊಂದು ಬಹಳ ಸಂತೋಷವಾಯಿತು. ಅದು ಏನೆಂದರೆ ಇದನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ. ಇದು ಒಂದು ಚಿಕ್ಕ ಪ್ರೋಗ್ರೆಸ್ಸಿವ್ ಲೆಜಿಸ್ಲೇಷನ್ ಅಂತ ಇಟ್ಟುಕೊಳ್ಳೋಣ. ಆದುದರಿಂದ ಇದನ್ನು ಎಲ್ಲರೂ ಸ್ವಾಗತ ಮಾಡಿದ್ದಕ್ಕಾಗಿ ಎಲ್ಲರಿಗೂ ತಮ್ಮ ಮೂಲಕ ಅಭಿನಂದಿಸುತ್ತಾ, ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

MR. SPEAKER.—The question is :

"That the Karnataka Land Reforms (Amendment) Bill, 1980 be taken into consideration."

The motion was adopted

Clause 2 and 3

"That clauses the 2 and 3 do stand part of Bill."

MR. SPEAKER.—The question is :

The motion was adopted

Clauses 2 and 3 were added to the Bill

CLAUSE 1 THE LONG TITLE, THE PREAMBLE AND THE ENACTING FORMULA

MR. SPEAKER.—The question is :

"That Clause 1, the long Title the Preamble and the Enacting Formula do stand part of the Bill."

The motion was adopted

Clause 1 the long Title, the Preamble and the Enacting Formula were added to the Bill.

MOTION TO PASS

SRI S. BANGARAPPA (Minister for Revenue and Agriculture).—Sir, I beg to move :

"That the Karnataka Land Reforms (Amendment) Bill 1980 be passed."

MR. SPEAKER.—The question is :

"That the Karnataka Land Reforms (Amendment) Bill 1980 be passed."

The motion was adopted and the Bill was passed.

MR. SPEAKER.—The House now stands adjourned to meet tomorrow at 1-00 P.M.

(The House adjourned at Fifty Minutes past Five of the Clock to meet again at One of the Clock on Wednesday the 27th February 1980.)